ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸಿದ ನೂರವರು ಮಹಿಳಾಮಣಿಗಳು

ಟಿ. ಆರ್. ನಾಗಪ್ಪ

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸಿದ ಮೂವರು ಮಹಿಳಾ ಮಣಿಗಳು

ಟಿ. ಆರ್. ನಾಗಪ್ಪ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

VAYASKARA SHIKSHANA KSHETRADALLI SRAMISIDA MOOVARU MAHILA MANIGALU by T. R. Nagappa, Published by Prasaranga, Bangalore University, Bangalore ; Pp. 64+viii

ಪ್ರಕಾಶಕರು :

ಹೆಚ್. ಆರ್. ದಾಸೇಗೌಡ

ನಿರ್ದೇಶಕ, ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಬೆಲೆ : 50 ಪೈಸೆ

ಮುದ್ರಣ :

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ – ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ

ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಈ ಉಪಯುಕ್ತ ಕೃತಿಯನ್ನು ಹೊರತರುವಲ್ಲಿ ವಿಶ್ವ ವಿದ್ಯಾಲಯದ ಜೊತೆ ಸಹಕರಿಸಿದ ಶ್ರೀಮಾನ್ ಟಿ. ಆರ್. ನಾಗಪ್ಪ ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ನಮ್ಮ ವಂದನೆಗಳು.

ಎಚ್. ನರಸಿಂಹಯ್ಯ
ಉಪಕುಲಪತಿ

ಅರಿಕೆ

ಭಾರತದಲ್ಲಿ ವಯಸ್ಕರ ಶಿಕ್ಷಣ ಇಂದಿನ ಪರಿಸ್ಥಿಯಲ್ಲಿ ಅಕ್ಷರಾಭ್ಯಾಸದಿಂದ ಪ್ರಾರಂಭವಾಗಿದೆ. ಓದುಬರಹ ಕಲಿಸುವ ಕಾರ್ಯಕ್ರಮಕ್ಕೆ ಪೂರಕವಾಗಿ ಅನೇಕ ಇತರ ಕಾರ್ಯಕ್ರಮಗಳು ನಡೆಯುತ್ತಿವೆ.

ವಯಸ್ಕರ ಶಿಕ್ಷಣದ ಯಶಸ್ಸಿಗೆ ಸರಕಾರ ಮತ್ತು ಖಾಸಗಿ ಪ್ರಯತ್ನ ಒಟ್ಟಾಗಿ ನಡೆಯುವುದು ಅಗತ್ಯ. ಅಂತೆಯೇ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಖಾಸಗಿ ಮುಖಂಡರೂ ಸಹಗಣನೀಯವಾದ ಸೇವೆ ಸಲ್ಲಿಸುತ್ತಿರುವರು. ಅಂತಹ ಸೇವೆ ಸಲ್ಲಿಸುತ್ತಿರುವ ಮೂರು ಮಹಿಳೆಯ ಜೀವನ ಪರಿಚಯ ಮಾಡಿ ಕೊಡುವ ಹೊತ್ತಿಗೆ ಇದು ಅವರ ವ್ಯಕ್ತಿತ್ವದ ಪರಿಚಯ ಹಾಗೂ ಅವರು ನಡೆಸಿದ ವಯಸ್ಕರ ಶಿಕ್ಷಣ ಕಾರ್ಯ ಮತ್ತು ಪ್ರಯೋಗ ಗಳು ಇತರ ವಯಸ್ಕರ ಶಿಕ್ಷಣ ಕಾರ್ಯಕರ್ತರಿಗೆ ದಾರಿದೀಪ ವಾಗಬಲ್ಲವು ಎಂದು ಹೇಳಿದಲ್ಲಿ ತಪ್ಪಾಗಲಾರದು.

ಈ ಹೊತ್ತಿಗೆಯ ಪ್ರಕಟಣೆಗೆ ಮೂಲ ಚೈತನ್ಯರಾದ ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗದ ನಿರ್ದೇಶಕ ಮಾನ್ಯ ಶ್ರೀ ಹೆಚ್. ಆರ್. ದಾಸೇಗೌಡ ಅವರಿಗೆ ನಾನು ಚಿರಋಣಿ. ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ವಿಶ್ವ ವಿದ್ಯಾಲಯದ ಕಾರ್ಯಕರ್ತರಿಗೂ ನನ್ನ ವಂದನೆಗಳು.

ಟಿ. ಆರ್. ನಾಗಪ್ಪ

ಅನುಬಂಧ

ವಯಸ್ಕರ ಶಿಕ್ಷಣ ವಿಚಾರದಲ್ಲಿ ಅಧ್ಯಯನ ಮಾಡಲು ನೆರವಾಗುವ ಕನ್ನಡ ಗ್ರಂಥಗಳು.

1. ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ: ಕೆ. ಬಸವಯ್ಯ, ಟಿ. ಆರ್. ನಾಗಪ್ಪ, ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು 1972

2. ನಿರಕ್ಷರತೆ ಮತ್ತು ಅದರ ನಿವಾರಣೆ: ಟಿ. ಆರ್. ನಾಗಪ್ಪ, ಸಿ. ಕೃಷ್ಣ, ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು 1974

3. ಸಾಕ್ಷರತಾ ಸಾಹಿತ್ಯ ಸೂತ್ರಗಳು: ಟಿ. ಆರ್. ನಾಗಪ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1972

4. ಜನತಾ ಶಾಲೆಗಳು: ಟಿ. ಆರ್. ನಾಗಪ್ಪ, ಪಠ್ಯಪುಸ್ತಕ ನಿರ್ದೇಶಸಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ 1973

5. ವಯಸ್ಕರ ಶಿಕ್ಷಣ: ಟಿ. ಆರ್. ನಾಗಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1975

6. ವಯಸ್ಕರ ಶಿಕ್ಷಣ ಸಾಧನೆ : ಟಿ. ಆರ್. ನಾಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1977

7. ಅನೌಪಚಾರಿಕ ಶಿಕ್ಷಣ ಪ್ರವೇಶ : ಟಿ. ಆರ್. ನಾಗಪ್ಪ, ಎ. ಕೃಷ್ಣಮೂರ್ತಿ, ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು 1977

8. ಭಾರತದ ಗ್ರಾಮೀಣ ಗ್ರಂಥಾಲಯಗಳು : ಟಿ. ಆರ್. ನಾಗಪ್ಪ, ಸಂಶೋಧನಾಧಿಕಾರಿ, ಕ.ರಾ.ವ.ಶಿ. ಸಮಿತಿ, ಮೈಸೂರು. 1977

9. ವಿಶ್ವದ ವಯಸ್ಕರ ಶಿಕ್ಷಣ ದೂತರು : ಟಿ. ಆರ್. ನಾಗಪ್ಪ, ಕ.ರಾ.ವ.ಶಿ. ಸಮಿತಿ, ಮೈಸೂರು 1977

ಪರಿವಿಡಿ



ಶ್ರೀಮತಿ ಕುಲ್‌ಸುಮ್ ಸಯಾನಿ

ಪದ್ಮಶ್ರೀ (ಶ್ರೀಮತಿ) ಕುಲ್‌ಸುಮ್ ಸಯಾನಿ

ಪೀಠಿಕೆ : ವಯಸ್ಕರ ನಿರಕ್ಷರತಾ ನಿರ್ಮೂಲನ ಶ್ರಮ ಸಾಧ್ಯವಾದ ಕಾರ್ಯ. ಈ ಕ್ಷೇತ್ರದಲ್ಲಿ ಹೆಸರಾಂತ ಸೇವೆ ಸಲ್ಲಿಸುವ ಸಂಘ, ಸಂಸ್ಥೆ ಮತ್ತು ವ್ಯಕ್ತಿಗಳಿಗೆ ಯುನೆಸ್ಕೊ ಪ್ರತಿವರ್ಷವೂ ಅಂತರ ರಾಷ್ಟ್ರೀಯ ಮಟ್ಟದ ಪಾರಿತೋಷಕ ನೀಡುತ್ತಿದೆ. ಒಂದು ಮಹಮದ್ ರೆಜಾಫಹಲ್ವಿ ಪಾರಿತೋಷಕ. ಎರಡನೆಯದು ಲೆನಿನ್ನನ ಹೆಂಡತಿ ಕೃಪಾಸ್ಕ್ಯರವರ ಹೆಸರಿನಲ್ಲಿ ರಷ್ಯ ಇಟ್ಟಿರುವ ಪಾರಿತೋಷಕ.

ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡಳಿಯೂ ಸಹ 1968ನೆಯ ಸಾಲಿನಿಂದ ರಾಷ್ಟ್ರಮಟ್ಟದ ಪಾರಿತೋಷಕವನ್ನು ನೀಡುವ ಸತ್ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದೆ. ಭಾರತದಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮವಾದ ಸೇವೆ ಸಲ್ಲಿಸುವ ಸಂಘ, ಸಂಸ್ಥೆ ಮತ್ತು ವ್ಯಕ್ತಿಗಳಿಗೆ ಪಂಡಿತ್ ಜವಹರಲಾಲ್ ನೆಹರು ಅವರ ಹೆಸರಿನಲ್ಲಿ 'ನೆಹರು ಸಾಕ್ಷರತಾ ಪ್ರಶಸ್ತಿ'ಯನ್ನು ನೀಡಲಾಗುವುದು. ಈ ರಾಷ್ಟ್ರೀಯ ಪಾರಿತೋಷಕವನ್ನು ಪಡೆದವರಲ್ಲಿ ಕುಲ್‌ಸುಮ್ ಸಯಾನಿ ಎರಡನೆಯವಳು. ಆಕೆಗೆ ಆ ಪ್ರಶಸ್ತಿ ಸಂದಿದ್ದು 1969ರಲ್ಲಿ. ಭಾರತ ಸರಕಾರ ಆಕೆ ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಮೆಚ್ಚಿ 1957ರಲ್ಲಿ 'ಪದ್ಮಶ್ರೀ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಬಾಲ್ಯ : ಕುಲ್‌ಸುಮ್‌ಸಯಾನಿ ಹುಟ್ಟಿದ್ದು 1900 ನೆಯ ಸಾಲಿನ ಅಕ್ಟೋಬರ್ 21ರಂದು. ಆಕೆಯ ತಂದೆ ರಾಜಬಳ್ಳಿ ಪಟೇಲ್. ಆತ ಉದಾರಿ. ಸುಧಾರಣೆಯಲ್ಲಿ ಅಪಾರ ನಂಬಿಕೆಯುಳ್ಳವನು. ಆತ ಮಹಾತ್ಮ ಗಾಂಧೀಜಿಯ ಖಾಸಗಿ ವೈದ್ಯನೂ ಹೌದು. ರಾಜಬಳ್ಳಿ ಪಟೇಲ್ ಕಾಂಗ್ರೆಸ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದನು. ಆತನ ಮನೆಯಲ್ಲಿ ಕಾಂಗ್ರೆಸ್ಸಿನ ಹಿರಿಯ ಕಾರ್ಯಕರ್ತರಾಗಿದ್ದ ಮೌಲಾನ ಅಬುಲ್ ಕಲಾಮ್ ಅಜಾದ್, ಪಂಡಿತ ಜವಹರಲಾಲ್ ನೆಹರು, ಸರದಾರ್ ವಲ್ಲಭಭಾಯಿ ಪಟೇಲ್ ಮುಂತಾದವರು ಆಗಾಗ್ಗೆ ಸಭೆ ಸೇರುತ್ತಿದ್ದರು. ಕುಲ್‌ಸುಮ್‌ಸಯಾನಿಯ ತಂದೆಯವರ ಮನೆಯ ವಾತಾವರಣ ಹೀಗಿತ್ತು. ಆದ್ದರಿಂದ ಕುಟುಂಬದ ವಾತಾವರಣ ಕುಲ್‌ಸುಮ್ ಸಯಾನಿಯ ಮೇಲೆ ಸತ್ಪ್ರಭಾವವನ್ನು ಬೀರಿ ಆಕೆಯನ್ನು ಸಮಾಜ ಸೇವಾಕಾರ್ಯಕ್ಕೆ ಸಿದ್ಧಗೊಳಿಸಿದ್ದು ಸಹಜವೇ ಆಗಿದೆ.

ಕುಲ್‌ಸುಮ್‌ಸಯಾನಿಗೆ ಆಕೆಯ 20ನೆಯ ವರ್ಷದಲ್ಲಿ ಡಾಕ್ಟರ್ ಜಾನ್ ಮಹಮದ್ ಸಯಾನಿಯವರೊಡನೆ ವಿವಾಹ ಜರುಗಿತು. ಆತ **ಜೆ.** ಪಿ. (Justice of peace) ಮತ್ತು ಗೌರವ ಮ್ಯಾಜಿಸ್ಟ್ರೇಟ್. ಜೊತೆಗೆ ಖಿಲಾಪತ್ ಮುಂತಾದ ಸಂಸ್ಥೆಗಳಲ್ಲಿ ಸದಸ್ಯನಾಗಿ ಸೇವೆ ಸಲ್ಲಿಸಿದ್ದನು.

ಕುಲಾಸುಮ್ ಸಯಾನಿಗೆ ಮೂರು ಮಕ್ಕಳು. ಹಿರಿಯ ಮಗ ಅಮೆರಿಕದಲ್ಲಿ ಖ್ಯಾತನಾದ ವೈದ್ಯ. ಉಳಿದ ಇಬ್ಬರು ಮುಂಬಯಿ ನಗರದಲ್ಲಿ ಚಲನಚಿತ್ರ ನಿರ್ದೇಶಕರು. ಆ ಇಬ್ಬರ ಪೈಕಿ ಹಮೀದ್ ಸಯಾನಿ ತನ್ನ 48ನೆಯ ವಯಸ್ಸಿನಲ್ಲಿ ತೀರಿ

ಕೊಂಡಳು. ಆದರಿಂದ ಕುಲ್‌ಸುಮ್ ಸಯಾನಿ ತನ್ನ ೩೪ ವಯಸ್ಸಿನಲ್ಲಿ ಪುತ್ರಶೋಕವನ್ನು ಅನುಭವಿಸಬೇಕಾಯಿತು.

ಸಮಾಜ ಸೇವೆ : ಕುಲ್‌ಸುಮ್ ಸಯಾನಿ ಕುಟುಂಬದ ವಾತಾವರಣದಲ್ಲಿ ಗಾಂಧಿವಾದಿಯಾದದ್ದು ಸಹಜವಾಗಿಯೇ ಇದೆ. ಆಕೆ ತನ್ನ ಇಡೀ ಜೀವಮಾನವನ್ನು ದೀನದಲಿತರ ಸೇವೆಗೆ ಅರ್ಪಿಸಿರುವಳು. ದೀನದಲಿತರ ಉದ್ಧಾರಕ್ಕೆ ವಿದ್ಯೆಯೇ ಮದ್ದು ಎಂಬ ನಂಬಿಕೆ ಆಕೆಗೆ. ಆದುದರಿಂದಲೇ ಕಳೆದ 50 ವರ್ಷಗಳಿಂದ ಅವರ ಶೈಕ್ಷಣಿಕ ಪ್ರಗತಿಗಾಗಿ ತನ್ನ ತನುಮನಧನ ವನ್ನು ಅರ್ಪಿಸಿರುವಳು. ನಿರಕ್ಷರತಾ ನಿವಾರಣೆ ಆಕೆಗೆ ಪ್ರಿಯ ವಾದ ಸೇವೆ. ಬೊಂಬಾಯಿ ನಗರ ಸಮಾಜ ಶಿಕ್ಷಣಸಮಿತಿ ಹುಟ್ಟಿದಂದಿನಿಂದಲೂ ಅದರ ಉಪಾಧ್ಯಕ್ಷಿಣಿಯಾಗಿ ಸಲ್ಲಿಸುತ್ತಿ ರುವ ಸುಯೋಗ ಆಕೆಗೆ ಸಂದಿದೆ.

ಕುಲುಸುಮ್‌ಸಯಾನಿ ತನ್ನ 27ನೆಯ ವಯಸ್ಸಿನಲ್ಲಿ ಚರಕ ತರಗತಿಗೆ ಸೇರಿದಳು. ಆ ಸಂದರ್ಭದಲ್ಲಿ ಆಕೆಗೆ ಸಮಾಜ ಸೇವೆಯ ಕಲ್ಪನೆ ಅಂಕುರವಾಯಿತು. ದೀನದಲಿತರ ವರ್ಗಕ್ಕೆ ಸೇರಿದ ಗೋಷಾ ಹೆಂಗಸರ ಉದ್ಧಾರಕ್ಕೆ ದುಡಿಯಬೇಕೆಂಬ ಆಸೆ ಉಂಟಾಯಿತು.

ಬ್ರಿಟಿಷ್ ಸರಕಾರ 1937ರಲ್ಲಿ ಬ್ರಿಟಿಷ್ ಪ್ರಾಂತ್ಯಗಳಿಗೆ ಪ್ರಾಂತೀಯ ಸ್ವಾಯತ್ತತೆಯನ್ನು (provincial autonomy) ನೀಡಿತು. ಈ ಸದವಕಾಶವನ್ನು ಭಾರತೀಯರ ಉದ್ಧಾರಕ್ಕೆ ಉಪಯೋಗಿಸಿಕೊಳ್ಳುವುದು ಭಾರತೀಯ ಮುಖಂಡರ ಉದ್ದೇಶವಾಗಿತ್ತು. ಭಾರತ ಸರಕಾರ ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿತು. ಸಮಿತಿಯ ಮಹಿಳಾ ವಿಭಾಗಕ್ಕೆ

ಕುಲ್‌ಸುಮ್ ಸಯಾನಿ ಸದಸ್ಯಳಾಗಿ ನೇಮಕವಾದಳು. ಗೋಷಾ ಮಹಿಳೆಯರ ಶಿಕ್ಷಣವಿಚಾರದಲ್ಲಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಭಾರತ ಸರಕಾರ ಒಂದು ಪ್ರಶ್ನಾವಳಿಯನ್ನು ತಯಾರಿಸಿತು. ಆ ಪ್ರಶ್ನಾವಳಿ ಆಕೆಯ ಗಮನವನ್ನು ಸೆಳೆಯಿತು. ಕುಲ್‌ಸುಮ್ ಸಯಾನಿ ಮಹಿಳಾ ಶಿಕ್ಷಣದ ವಿಚಾರದಲ್ಲಿ ಒಂದು ಸಮಗ್ರ ಯೋಜನೆಯನ್ನು ತಯಾರಿಸಿ 1939ರಲ್ಲಿ ಮೇಲ್ಕಂಡ ಸಮಿತಿಗೆ ಕಳುಹಿಸಿದಳು.

ಗೃಹತರಗತಿಯ ಯೋಜನೆಯ ಪ್ರಯೋಗ : ಭಾರತದಲ್ಲಿ ಮಧ್ಯಮ ವರ್ಗದ ಮಹಿಳೆಯರ ಪರಿಸ್ಥಿತಿ ಅಷ್ಟೇನು ತೃಪ್ತಿಕರವಾಗಿರಲಿಲ್ಲ. ಅದರಲ್ಲೂ ಗೋಷಾ ಹೆಂಗಸರ ಪರಿಸ್ಥಿತಿ ಹೇಳಿಕೊಳ್ಳುವಂತಿರಲಿಲ್ಲ. ಆದಕಾರಣ, ಅಂತಹ ಮಹಿಳೆಯರ ಉದ್ಧಾರವನ್ನು ವಿದ್ಯೆಯ ಮೂಲಕ ಸಾಧಿಸಿದವಳು ಕುಲಾಸುಮ್ ಸಯಾನಿ.

ಮಹಿಳೆಯರಿಗೆ ಸ್ವಾಭಾವಿಕವಾಗಿ ನಾಚಿಕೆ. ಅವರು ಮನೆಯಿಂದ ಹೊರಗೆ ಬಂದು ಓದುಬರಹ ಕಲಿಯಲು ಸಾಮಾನ್ಯವಾಗಿ ಒಪ್ಪಲಾರರು. ಗೋಷಾ ಹೆಂಗಸರ ಪರಿಸ್ಥಿತಿಯಂತೂ ಎಲ್ಲರಿಗೂ ತಿಳಿದಿದ್ದೆ. ಆದ್ದರಿಂದ ಅವರಿಗೆ 'ಗೃಹ ತರಗತಿ ಯೋಜನೆ'ಯನ್ನು ಕುಲ್‌ಸುಮ್ ಸಯಾನಿ ಕೈಕೊಂಡಳು. ಆ ಯೋಜನೆಯಪ್ರಕಾರ ಗೋಷಾಹೆಂಗಸರು ಓದುಬರಹಕಲಿಯಲು ಹೊರಗೆ ಹೋಗದೆ ಮನೆಯಲ್ಲೇ ಕಲಿಯಬಹುದಾಗಿತ್ತು. ಈ ತೆರನಾದ ಪ್ರಾಯೋಗಿಕ ಯೋಜನೆ ಪ್ರಾರಂಭವಾಯಿತು. ಅದರ ಅಂಗವಾಗಿ ಎರಡು 'ಗೃಹ ತರಗತಿ'ಗಳು ಆರಂಭವಾದವು. ತರಗತಿಗಳನ್ನು ನಡೆಸಲು ಇಬ್ಬರು ಉಪಾಧ್ಯಾಯಿನಿ

ಯರು ನೇಮಕವಾದರು. ಪ್ರತಿಯೊಬ್ಬ ಉಪಾಧ್ಯಾಯಿನಿ ಪ್ರತಿ ದಿನ ಮೂರು ಮನೆಗಳಿಗೆ ಭೇಟಿಯಿತ್ತು ಅಲ್ಲಿ ಸೇರುತ್ತಿದ್ದ ಮಹಿಳೆಯರಿಗೆ ಎರಡು ಘಂಟೆಯ ಕಾಲ ಪಾಠ ಹೇಳಿ ಕೊಡಬೇಕಾಗಿತ್ತು.

ವಯಸ್ಕರ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಕೂಡಿಸುವುದು ಪ್ರಯಾಸದ ಕೆಲಸ. ಮಹಿಳಾ ತರಗತಿಗಳೇನು ಇದಕ್ಕೆ ಹೊರತಲ್ಲ. ತರಗತಿಗಳಿಗೆ ಗಂಡಸರಿಗಿಂತ ಹೆಂಗಸರನ್ನು ಕೂಡಿಸುವುದು ಹೆಚ್ಚಿನ ಸಮಸ್ಯೆ. ಈ ಸಮಸ್ಯೆಯನ್ನು ಕುಲ್‌ಸುಮ್ ಸಯಾನಿ ಎದುರಿಸಬೇಕಾಯಿತು. ಎರಡನೆಯದಾಗಿ ದಕ್ಷರಾದ ಉಪಾಧ್ಯಾಯಿನಿಯರು ದೊರಕುವುದು ಕಷ್ಟ. ಈ ಅಂಶ ಆಕೆಯ ಅನುಭವಕ್ಕೆ ಬಂದಿತ್ತು. ಉಪಾಧ್ಯಾಯಿನಿಯರು ಕೇವಲ ಸಂಭಾವನೆಗೆ ಮಾತ್ರ ದುಡಿಯುವವರಾಗಿದ್ದರು. ಈ ಸರಿಸ್ಥಿತಿಯಲ್ಲಿ ಈಗ ಹೆಚ್ಚು ಬದಲಾವಣೆ ಕಾಣುತ್ತಿಲ್ಲ. ಆದರಿಂದ ವಿದ್ಯಾರ್ಥಿನಿಯರನ್ನು ತರಗತಿಗೆ ತಪ್ಪದೆ ಹಾಜರಾಗುವಂತೆ ಹುರಿದುಂಬಿಸಲು ಉಪಾಧ್ಯಾಯನಿಯರಿಗೆ ಸಾಧ್ಯವಿರಲಿಲ್ಲ. ವಯಸ್ಕರ ಶಿಕ್ಷಣದ ಯಶಸ್ಸು ಮಾನವೀಯತೆ ಮತ್ತು ಶ್ರದ್ಧೆಯಿಂದ ಕೂಡಿದ ಸೇವೆಯನ್ನು ಅವಲಂಬಿಸಿದೆ.

ಮೇಲ್ಕಂಡ ಗೃಹತರಗತಿಗಳು ಯಶಸ್ವಿಯಾಗಿ ನಡೆದು ಪ್ರೋತ್ಸಾಹದಾಯಕವಾಗಿತ್ತು. ಆದರಿಂದ ಕುಲ್‌ಸುಮ್ ಸಯಾನಿಗೆ ಆ ಕಾರ್ಯದಲ್ಲಿ ಉತ್ತೇಜನ ಉಂಟಾಯಿತು. ಈ ದಿಸೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಲು ಅವಕಾಶವಿದೆ ಎಂಬ ಅರಿವು ಆಕೆಗೆ ಆಯಿತು.

ಪ್ರತಿಯೊಂದು ಗೃಹತರಗತಿಯ ವೆಚ್ಚ 100 ರೂಪಾಯಿ. ಪ್ರತಿಯೊಬ್ಬ ಉಪಾಧ್ಯಾಯನಿಗೆ ತಿಂಗಳಿಗೆ 20 ರೂಪಾಯಿ

ಯಂತೆ ಸಂಭಾವನೆ ಪಾವತಿಯಾಗುತ್ತಿತ್ತು. ಮೇಲೆ ತಿಳಿಸಿದ ಐದು ಪ್ರಾಯೋಗಿಕ ತರಗತಿಗಳ 200 ರೂ. ವೆಚ್ಚವನ್ನು ಕುಲ್‌ಸುಮ್ ಸಯಾನಿ ವಹಿಸಿಕೊಂಡಳು. ಆದರೆ ಆ ಯೋಜನೆಯನ್ನು ಮುಂದುವರಿಸಲು ಆಕೆಗೆ ಹಣದ ಸಮಸ್ಯೆ ತಲೆದೋರಿತು. ಆ ಸಮಯಕ್ಕೆ ಸರಿಯಾಗಿ ಬೊಂಬಾಯಿ ನಗರ ಮಹಿಳಾ ಮಂಡಳಿ ಆಕೆಯ ನೆರವಿಗೆ ಬಂದಿತು. ಮಹಿಳೆಯರಿಗೆ ಹನ್ನೊಂದು ತರಗತಿಗಳನ್ನು ತೆರೆಯುವಂತೆ ಮಹಿಳಾ ಮಂಡಳಿಯು ಕುಲ್‌ಸುಮ್ ಸಯಾನಿಯನ್ನು ಕೇಳಿಕೊಂಡಿತು. ತರಗತಿಗಳು ಪ್ರಾರಂಭವಾದವು. ಆ ತರಗತಿಗಳಲ್ಲಿ ಒಟ್ಟು 420 ಮಂದಿ ಮಹಿಳಾ ವಿದ್ಯಾರ್ಥಿನಿಯರು ದಾಖಲಾದರು. ಈ ಕಾರ್ಯಕ್ರಮದಿಂದ ಕುಲ್‌ಸುಮ್ ಸಯಾನಿಗೆ ಬಿಡುವು ದುರ್ಲಭವಾಯಿತು. ಆಕೆ ಪ್ರತಿನಿತ್ಯವೂ ಬೆಳಿಗ್ಗೆ ತನ್ನ ಕಾರಿನಲ್ಲಿ ತನ್ನ ಮಕ್ಕಳು ಮತ್ತು ಗಂಡನೊಂದಿಗೆ ಹೊರಡುತ್ತಿದ್ದು; ದಾರಿಯಲ್ಲಿ ತನ್ನ ಮಕ್ಕಳನ್ನು ಶಾಲೆಯಲ್ಲಿ ಬಿಟ್ಟು ನಂತರ ತನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಬಿಡುತ್ತಿದ್ದಳು. ಆನಂತರ ಮಹಿಳಾ ತರಗತಿಗಳ ವ್ಯವಸ್ಥೆ ಮತ್ತು ಮೇಲ್ವಿಚಾರಣೆಯಲ್ಲಿ ನಿರತಳಾಗುತ್ತಿದ್ದಳು. ಮಹಿಳಾ ವಿದ್ಯಾರ್ಥಿನಿಯರನ್ನು ಒಂದು ಕಡೆ ಕಲೆಹಾಕುವುದು ಹಾಗೂ ಅವರನ್ನು ತರಗತಿಗೆ ತಪ್ಪದೆ ಹಾಜರಾಗುವಂತೆ ಪ್ರೋತ್ಸಾಹಿಸುವುದು ಅವಳ ದಿನಚರಿ ಆಯಿತು. ಈ ಕಾರ್ಯನೆರವೇರಿಸಲು ಗಲ್ಲಿಗಳನ್ನು ಸಹ ಸುತ್ತದೆ ಬಿಡಲಿಲ್ಲ. ಕೆಲವು ತರಗತಿಗಳಿಗೆ ವಿದ್ಯಾರ್ಥಿನಿಯರು ತಮ್ಮ ಮಕ್ಕಳೊಡನೆ ಹಾಜರಾಗುತ್ತಿದ್ದರು. ಇದೊಂದು ಸೋಜಿಗದ ಸಂಗತಿಯಾಗಿತ್ತು.

ಕುಲ್‌ಸುಮ್ ಸಯಾನಿ ವಿದ್ಯಾರ್ಥಿನಿಯರಿಗೆ ಆಗಾಗ್ಗೆ ಸೂಕ್ತ ಸಲಹೆ ನೀಡುತ್ತಿದ್ದಳು. ಆದರೆ ಗಂಡಸರಿಗೆ ಒಂದು ರೀತಿಯ ಸಂಶಯ–ತಮ್ಮ ಮನೆಯ ಹೆಂಗಸರಿಗೆ ಏನು ಹೇಳುವಳೋ ಎಂದು! ಅದರಿಂದ ಅವರು ಬಾಗಿಲ ಹಿಂದೆ ನಿಂತು ಕುಲ್‌ಸುಮ್ ಸಯಾನಿಯ ಮಾತುಗಳನ್ನು ಕೇಳಿಸಿ ಕೊಳ್ಳುತ್ತಿದ್ದರು. ಆಕೆಗೆ ಇದೊಂದು ಅಪೂರ್ವವಾದ ಅನುಭವ. ಪ್ರತಿನಿತ್ಯವೂ ಕುಲ್‌ಸುಮ್ ಸಯಾನಿಗೆ ಮೇಲೆ ಹೇಳಿದಂತೆ ಹಗಲಿನಲ್ಲಿ ಎಡೆಬಿಡದ ಕಾರ್ಯಕ್ರಮವಿತ್ತು. ತನ್ನ ದಿನಚರಿ ಮುಗಿದನಂತರ ಆಕೆ ತನ್ನ ಮಕ್ಕಳು ಮತ್ತು ಗಂಡನನ್ನು ಕಾರಿನಲ್ಲಿ ಕೂರಿಸಿಕೊಂಡು ಮನೆಗೆ ವಾಪಸು ಹೋಗುತ್ತಿದ್ದಳು. ಇದು ಆಕೆಯ ದಿನಚರಿ.

ಸೇವಾ ವಿಸ್ತರಣೆ: ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯ ಸೋಷಿಯಲ್ ಸರ್ವೀಸ್ ಲೀಗ್‌ನ ಗೌರವ ಕಾರ್ಯದರ್ಶಿ ಶ್ರೀಮತಿಗೋಖಲೆ. ಆಕೆಯ ನೇತೃತ್ವದಲ್ಲಿ ನಿರಕ್ಷರತಾ ನಿವಾರಣಾ ಚಳುವಳಿ 1938 ರಲ್ಲಿ ಪ್ರಾರಂಭ ವಾಯಿತು. ಆ ಚಳುವಳಿಯಲ್ಲಿ ಪುರಸಭೆ, ಸರಕಾರ ಮತ್ತು ಜನತೆ ಸಹಕರಿಸಿದವು. ಆಕೆ ಕೈಕೊಂಡ ಕೆಲಸ ಚಿಕ್ಕ ಪ್ರಮಾಣದಲ್ಲಿದ್ದರೂ ಚೊಕ್ಕವಾಗಿ ನಡೆಯುತ್ತಿತ್ತು. ಗೋಖಲೆ ನಡೆಸುತ್ತಿದ್ದ ಸಂಸ್ಥೆಯನ್ನು ಸರಕಾರ ವಹಿಸಿಕೊಳ್ಳಲು ಇಚ್ಛಿಸಿತು. ಆಗತಾನೆ ಬೊಂಬಾಯಿನಗರ ಸಮಾಜ ಶಿಕ್ಷಣ ಸಮಿತಿ ಪ್ರಾರಂಭವಾಗಿತ್ತು. ಆಗಿನ ಮುಖ್ಯ ಮಂತ್ರಿ ಮತ್ತು ವಿದ್ಯಾಮಂತ್ರಿಯಾಗಿದ್ದ ಬಿ. ಜಿ. ಖೇರ್ ಅದರ ಅಧ್ಯಕ್ಷ. ಸಮಿತಿಯು ಗೋಷಾ ಮಹಿಳೆಯರಿಗೆ 50 ವಯಸ್ಕರ ತರಗತಿ

ಗಳನ್ನು ತೆರೆಯುವಂತೆ ಕುಲ್‌ಸುಮ್ ಸಯಾನಿಯನ್ನು ಕೇಳಿ ಕೊಂಡಿತು. ಆಕೆ ಸಂತೋಷದಿಂದ ಆ ಜವಾಬ್ದಾರಿಯನ್ನು ವಹಿಸಿಕೊಂಡಳು. ಆ ಸಂದರ್ಭದಲ್ಲಿ ಆಕೆಗೊಂದು ಅಪೂರ್ವ ಅನುಭವ ಆಯಿತು. ಒಂದು ದಿನ 12 ಮಂದಿ ಕಟುಕರ ನಿಯೋಗ ಕುಲ್‌ಸುಮ್ ಸಯಾನಿಯನ್ನು ನೋಡಲು ಬಂದಿತು. ನಿರಕ್ಷರಕುಕ್ಷಿಗಳಾಗಿದ್ದ ಅವರ ಹೆಂಗಸರಿಗೆ ಓದು ಬರಹ ಕಲಿಸುವುದರ ಜೊತೆಗೆ ಲೆಕ್ಕವನ್ನೂ ಸಹ ಹೇಳಿಕೊಡಬೇಕೆಂದು ಆ ನಿಯೋಗ ಕುಲ್‌ಸುಮ್ ಸಯಾನಿಗೆ ಒತ್ತಾಯ ಪೂರ್ವಕ ವಾಗಿ ಕೇಳಿಕೊಂಡಿತು. ಇಲ್ಲದಿದ್ದರೆ ಪ್ರತಿ ಸಾರಿಯೂ ಮನೆಯಿಂದ ಒಯ್ಯುವ ರೂಪಾಯಿಗಳಿಗೆ ಲೆಕ್ಕ ಒಪ್ಪಿಸುವ ಶ್ರಮ ತಪ್ಪದು ಎಂಬುದಾಗಿ ಅವರು ತಿಳಿಸಿದರು. ಕುಲ್‌ಸುಮ್ ಸಯಾನಿ ಒಂಬತ್ತು ವರ್ಷಗಳ ಕಾಲ ಸತತವಾಗಿ ಘೋಷಾ ಮಹಿಳಾ ತರಗತಿಗಳ ವ್ಯವಸ್ಥೆ ಮತ್ತು ಮೇಲ್ವಿ ಚಾರಣೆಯನ್ನು ನಿರ್ವಹಿಸಿದಳು.

ನವಸಾಕ್ಷರರಿಗೆ ಪ್ರತ್ಯೇಕ ನಿಯತಕಾಲಿಕ ಪತ್ರಿಕೆ : ವಯಸ್ಕರಿಗೆ ಓದು ಬರಹ ಕಲಿಸಿದರೆ ಸಾಲದು. ಅವರು ಕಲಿತ ಓದನ್ನು ಉಳಿಸಿಕೊಳ್ಳಬೇಕು. ಹಾಗೂ ಅದನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು ಅಗತ್ಯ. ಇಲ್ಲದಿದ್ದರೆ ಕಲಿತದ್ದು ಮರೆತು ಹೋಗುವುದು. ಅದು ಹೊಳೆಯಲ್ಲಿ ಹುಣಿಸೆಹಣ್ಣು ಕಿವುಚಿದಂತೆ ಆಗುವುದು. ಆದ್ದರಿಂದ ನವಸಾಕ್ಷರರಿಗಾಗಿ 1940 ರ ಜುಲೈ ತಿಂಗಳಿನಲ್ಲಿ 'ರಹಬರ್' ಎಂಬ ಪತ್ರಿಕೆಯ ಪ್ರಕಟಣೆಯನ್ನು ಕುಲ್‌ಸುಮ್ ಸಯಾನಿ ಕೈಕೊಂಡಳು. ಅದು ಪ್ರಾರಂಭದಲ್ಲಿ ಮಾಸಪತ್ರಿಕೆ. ಕ್ರಮೇಣ ಪತ್ರಿಕೆ ಜನಪ್ರಿಯ

ವಾಯಿತು. ಆದರಿಂದ ಓದುಗರ ಬೇಡಿಕೆಯು ಪ್ರಕಾರ ಅದು ಪಾಕ್ಷಿಕ ಪತ್ರಿಕೆಯಾಗಿ ಪರಿವರ್ತನೆ ಆಯಿತು.

'ರಹಬರ್' ಪತ್ರಿಕೆಯ ಉದ್ದೇಶ ಎರಡು. 1) ನವ ಸಾಕ್ಷರರಲ್ಲಿ ಓದುವ ಕುತೂಹಲವನ್ನು ಕೆರಳಿಸಿ ಅವರ ಜ್ಞಾನಾ ರ್ಜನೆಗೆ ನೆರವು ನೀಡುವುದು. 2) ಹಿಂದೂಸ್ಥಾನಿಯನ್ನು ರಾಷ್ಟ್ರಭಾಷೆಯನ್ನಾಗಿ ಪರಿವರ್ತಿಸಲು ನೆರವಾಗುವುದು. ಅದು ಮಹಾತ್ಮ ಗಾಂಧೀಜಿಯವರ ಅಪೇಕ್ಷೆಯೂ ಆಗಿತ್ತು. ಈ ಎರಡು ಉದ್ದೇಶಗಳನ್ನು ಕಾರ್ಯಗತ ಮಾಡುವುದು ಆ ಪತ್ರಿಕೆಯ ಪಾಲಿಗೆ ಬಿತ್ತು. 'ರಹಬರ್' ಉರ್ದು, ಗುಜರಾತಿ ಮತ್ತು ದೇವ ನಾಗರಿ ಲಿಪಿಗಳಲ್ಲಿ ಪ್ರಕಟವಾಯಿತು. ಭಾವೈಕ್ಯತೆ, ಸಹೋದರ ಭಾವನೆ ಮತ್ತು ಏಕರೀತಿಯಾದ ಸಂಸ್ಕೃತಿಯನ್ನು ಸಾರುವುದು ಈ ಪತ್ರಿಕೆಯ ಗುರಿಯಾಗಿತ್ತು. ಹಿಂದಿ ಭಾಷೆ ಬಲ್ಲವರು ಈ ಪತ್ರಿಕೆಯ ಮೂಲಕ ಉರ್ದು ಕಲಿತರು. ಉರ್ದು ಬಲ್ಲವರು ಹಿಂದಿ ಕಲಿತರು. ಗುಜರಾತಿ ಲಿಪಿಯಲ್ಲಿ 'ರಹಬರ್' ಹನ್ನೊಂದು ವರ್ಷಗಳ ಕಾಲ ಪ್ರಕಟವಾಯಿತು. ಆ ಅವಧಿಯಲ್ಲಿ ಸಾವಿರಾರು ಗುಜರಾತಿಗಳು ಹಿಂದೂಸ್ಥಾನಿ ರಾಷ್ಟ್ರ ಭಾಷೆಯನ್ನು ಕಲಿತರು. ಭಾರತ ಸರಕಾರದ ಶಿಕ್ಷಣ ಸಲಹೆಗಾರರಾಗಿದ್ದ ಡಾ॥ ತಾರಾಚಂದ್ 'ರಹಬರ್' ಪತ್ರಿಕೆಯ ಮೂಲಕ ಗುಜರಾತಿಯನ್ನು ಕಲಿತರು. ಎಂದು ಹೇಳಿದಲ್ಲಿ ಪ್ರಾಯಶಃ ಉತ್ಪ್ರೇಕ್ಷೆಯಾಗಲಾರದು.

'ರಹಬರ್' ಮೂರು ಲಿಪಿಗಳಲ್ಲಿ ಪ್ರಕಟವಾಗುತ್ತಿತ್ತು ಎಂಬುದಾಗಿ ಮೇಲೆ ಹೇಳಿದೆಯಷ್ಟೆ. ಆದರೆ ಆ ಮೂರು ಲಿಪಿಗಳಲ್ಲಿ ಪ್ರಕಟವಾಗುತ್ತಿದ್ದ ವಿಷಯ ಒಂದೇ. ಭಾಷೆ ಸರಳ ಹಿಂದೂಸ್ಥಾನಿ. ಆ ಪತ್ರಿಕೆ ವಯಸ್ಕ ವಿದ್ಯಾರ್ಥಿಗಳಿಗೆ

ಆಕರ್ಷಕವಾಗಿತ್ತು. ಅದು ಕುರುಡನಿಗೆ ಊರುಗೋಲಿನಂತಿದ್ದು ಸಹಾಯಕವಾಗಿತ್ತು ನವಸಾಕ್ಷರರಿಗೆ. ಆ ಪತ್ರಿಕೆಯ ಮೂಲಕ ಹೊರಗಿನ ಪ್ರಪಂಚದ ವ್ಯವಹಾರಗಳು ಪರಿಚಯವಾಗುತ್ತಿದ್ದವು. 'ರಹಬರ್' ಪತ್ರಿಕೆಯಲ್ಲಿ ವಿವಿಧ ಧರ್ಮ ಮತ್ತು ಸಂಸ್ಕೃತಿಗಳ ಪರಿಚಯವನ್ನು ಮಾಡಿಕೊಡಲಾಗುತ್ತಿತ್ತು.

ವಯಸ್ಕರ ತರಗತಿಯಲ್ಲಿ ಉಪಯೋಗಿಸುತ್ತಿದ್ದ ಉರ್ದು ಪಠ್ಯಪುಸ್ತಕಗಳು ಎರಡು. ಅದಕ್ಕೆ ಪೂರಕವಾಗಿತ್ತು 'ರಹಬರ್'. ಈ ಪತ್ರಿಕೆ ನವಸಾಕ್ಷರರಿಗೇ ಅಲ್ಲದೆ ವಯಸ್ಕರ ತರಗತಿಯ ಉಪಾಧ್ಯಾಯನಿಯರ ಜ್ಞಾನಾರ್ಜನೆಗೂ ಸಹ ಸಹಕಾರಿಯಾಗಿತ್ತು. ಕುಲ್‌ಸುಮ್ ಸಯಾನಿಗೆ ಆ ಪತ್ರಿಕೆಯ ಪ್ರಕಟಣೆ ಒಂದು ಹೊರೆಯಾಗಿತ್ತು. ಆಕೆಯ ಕಾಲವೆಲ್ಲಾ ಅದಕ್ಕೇ ವಿನಿಯೋಗವಾಗುತ್ತಿತ್ತು. ಪತ್ರಿಕೆಯ ಪ್ರಕಟಣೆಆಕೆಗೆ ಮಾನಸಿಕವಾಗಿ, ದೈಹಿಕವಾಗಿ ಮತ್ತು ಆರ್ಥಿಕವಾಗಿ ಹೆಚ್ಚು ಹೊರೆಯಾಗಿತ್ತು. ಅದರ ಪ್ರಕಟಣೆ ಆಕೆಯ ಕೈಕಚ್ಚುತ್ತಿತ್ತು. ಆದರೂ ಆ ಕಾರ್ಯವನ್ನು ಸಂತೋಷದಿಂದ ನೆರವೇರಿಸುತ್ತಿದ್ದಳು. ಕಾರಣ, ಆ ಮೂಲಕವಾದರೂ ಕಿಂಚಿತ್ ಸೇವೆ ಸಲ್ಲಿಸುವ ಅವಕಾಶ ದೊರೆಯಿತಲ್ಲ ಎಂಬ ಸಮಾಧಾನ ಆಕೆಗೆ. ದುರದೃಷ್ಟಕ್ಕೆ ಸರಿಯಾಗಿ 'ರಹಬರ್' 1960ರಲ್ಲಿ ನಿಂತಿತು. ಅಂತೂ ಇಪ್ಪತ್ತು ವರ್ಷಗಳ ಕಾಲ 'ರಹಬರ್' ಬಾಳಿ ಒಮ್ಮೆಲೇ ಅದು ಮುಕ್ತಾಯವಾಯಿತು.

ವಿದ್ಯಾಮಂದಿರ : ವಯಸ್ಕರ ತರಗತಿ ಮುಗಿದನಂತರ ಸಾಕ್ಷರತೆಯ ಸ್ಥಿರೀಕರಣಕ್ಕೆ ವಿದ್ಯಾಮಂದಿರದ ವ್ಯವಸ್ಥೆ ಅಗತ್ಯ ತಾನೆ ? ಅದರ ಅವಧಿ ಎಂಟು ತಿಂಗಳು. ವಯಸ್ಕರ ತರಗತಿಯ

ಅವಧಿ ನಾಲ್ಕು ತಿಂಗಳು. ಒಂದು ವರ್ಷ ಒಟ್ಟು ಆ ತರಗತಿ ನಡೆಯು ತ್ತಿತ್ತು. ಕೆಲವು ವಿದ್ಯಾಮಂದಿರಗಳಲ್ಲಿ ವಿದ್ಯಾರ್ಥಿನಿಯರ ಉತ್ಸಾಹ ಗಮನಾರ್ಹ ಮತ್ತು ಆದರ್ಶವಾಗಿತ್ತು. ಅವರು ತಮ್ಮ ತಮ್ಮಲ್ಲೇ ಚಂದಾ ಕೂಡಿಸಿ ವಿದ್ಯಾಮಂದಿರ ತರಗತಿಯ ಉಪಾಧ್ಯಾಯಿನಿಯರ ಸಂಭಾವನೆ ಸಲ್ಲಿಸುತ್ತಿದ್ದರು. ವಿದ್ಯಾ ಮಂದಿರ ಮುಗಿದ ನಂತರವೂ ಸಹ ಅನೇಕ ವಿದ್ಯಾರ್ಥಿನಿಯರು ತಮ್ಮ ಜ್ಞಾನಾರ್ಜನೆಯನ್ನು ಮುಂದುವರಿಸಿದ್ದು ಕುಲ್‌ಸುಮ್ ಸಯಾನಿಯ ಅನುಭವಕ್ಕೆ ಬಂದ ಅಂಶ.

ಮೌಲ್ವಿಗಳ ವಿರೋಧ: ಕುಲ್‌ಸುಮ್ ಸಯಾನಿ ಕೇವಲ 'ರಹಬರ್' ಪತ್ರಿಕೆಯ ಪ್ರಕಟಣೆಯಿಂದ ತೃಪ್ತಳಾಗಲಿಲ್ಲ. 1940ರ ಫೆಬ್ರುವರಿ–ಮೊಹರಂ. ಅಂದಿನಿಂದ 10 ದಿನಗಳ ಕಾಲ ಗಹನವಾದ ಧಾರ್ಮಿಕ ಮತ್ತು ಸಾಮಾಜಿಕ ಸಮಸ್ಯೆಗಳ ಮೇಲೆ ಸಾರ್ವಜನಿಕ ಉಪನ್ಯಾಸಗಳನ್ನು ಕುಲ್‌ಸುಮ್‌ಸಯಾನಿ ಏರ್ಪಡಿಸಿದಳು. ಹತ್ತು ದಿನಗಳಲ್ಲಿ ಇಪ್ಪತ್ತು ಉಪನ್ಯಾಸಗಳು ನಡೆದವು–ಪ್ರತಿದಿನವೂ ಎರಡು ಉಪನ್ಯಾಸಗಳಂತೆ. ಧಾರ್ಮಿಕ ವಿಷಯದ ಮೇಲೆ ಒಂದು. ಎರಡನೆಯದು ಅಂದಿನ ಸಾಮಾಜಿಕ ಪರಿಸ್ಥಿತಿಯ ವಿಶ್ಲೇಷಣೆ. ವಿಷಯ 'ಇಸ್ಲಾಂನಲ್ಲಿ ಮಹಿಳೆಯರ ಪಾತ್ರ'. ಈ ಕಾರ್ಯಕ್ರಮವನ್ನು ಮೌಲ್ವಿಗಳು ವಿರೋಧಿಸಿದರು. ಧಾರ್ಮಿಕ ವಿಷಯ ಪ್ರಸಾರ ತಮ್ಮ ಗುತ್ತಿಗೆ ಎಂಬುದು ಮೌಲ್ವಿಗಳ ಭಾವನೆ. ಎರಡನೆಯದಾಗಿ ಉಪನ್ಯಾಸಗಳ ವಿಷಯ ಅವರಿಗೆ ಹಿಡಿಸಲಿಲ್ಲ. ಅಂತಹ ಉಪನ್ಯಾಸಗಳಿಂದ. ಜನತೆ ಜಾಗೃತಿಗೊಂಡಲ್ಲಿ ಮುಂದೆ ತಮ್ಮ ಬೇಳೆ ಬೇಯದು ಎಂಬುದು ಮೌಲ್ವಿಗಳ ಭಯ. ಆದರೆ ಕುಲ್‌ಸುಮ್ ಸಯಾನಿ ಮೌಲ್ವಿಗಳ ಬೆದರಿಕೆಗೆ ಜಗ್ಗಲಿಲ್ಲ.

ಅಧ್ಯಯನ ಗೋಷ್ಠಿಯ ಪ್ರಯೋಗ: ಕುಲ್‌ಸುಮ್ ಸಯಾನಿ ಕೈಕೊಂಡ ಇನ್ನೊಂದು ಪ್ರಯೋಗದಲ್ಲಿ ಸಮಾಜ ಶಿಕ್ಷಣ ಸಮಿತಿಯ ಅಧಿಕಾರವರ್ಗ ಪಾಲುಗೊಂಡಿತು. ಅದೇ ಅಧ್ಯಯನ ಗೋಷ್ಠಿ. ವ್ಯಾಸಂಗಕ್ಕೆ ಆಯ್ಕೆ ಮಾಡಿಕೊಂಡ ಪುಸ್ತಕ 'ಭಾರತದ ಸ್ವಾತಂತ್ರ್ಯ ಚಳುವಳಿ'. ಅದರ ಗ್ರಂಥಕರ್ತ ಕಂಜಿದ್ವಾರಕದಾಸ್. ಆತ ಕಾರ್ಮಿಕ ಮುಖಂಡ. ಅನಿಬೆ ಸೆಂಟರ ಕಾಲದಿಂದ ಹಿಡಿದು ದುಂಡು ಮೇಜಿನ ಪರಿಷತ್ತಿನವರೆಗೆ ನಡೆದ ಸ್ವಾತಂತ್ರ್ಯ ಚಳುವಳಿಯ ವಿವರಣೆ ಆ ಪುಸ್ತಕದ ವಸ್ತು. ಬ್ರಿಟನ್ನಿನ ಕಾರ್ಮಿಕ ಪಕ್ಷದ ಮುಖಂಡ ಹಾಗೂ ಪ್ರಧಾನಿಯಾಗಿದ್ದ ಆಟ್ಲಿ ಈ ಗ್ರಂಥಕ್ಕೆ ಮುನ್ನುಡಿ ಬರೆದುಕೊಟ್ಟಿದ್ದರು.

ಗೋಷ್ಠಿಯ ಸದಸ್ಯರ ಪೈಕಿ ಒಬ್ಬರು ಪುಸ್ತಕದ ಒಂದೊಂದು ಪುಟವನ್ನು ಓದಿ ವಿವರಿಸಬೇಕಿತ್ತು. ಅಧ್ಯಯನ ಗೋಷ್ಠಿಯ ಇತರ ಸದಸ್ಯರು ಓದುತ್ತಿದ್ದುದನ್ನು ಕೇಳುತ್ತಿದ್ದರಲ್ಲದೆ ಓದಿದ ವಿಷಯದ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದರು. ಈ ವಿಧಾನದಿಂದ ಓದಿದ ವಿಷಯ ಎಲ್ಲರಿಗೂ ಚೆನ್ನಾಗಿ ಮನದಟ್ಟಾಗುತ್ತಿತ್ತು. ಜೊತೆಗೆ ಓದಿ ವಿವರಿಸುತ್ತಿದ್ದವನಿಗೆ ವಿಷಯ ಹೆಚ್ಚು ಸ್ಫುಟವಾಗುತ್ತಿತ್ತು. ಈ ರೀತಿಯಾದ ವ್ಯವಸ್ಥೆಯಿಂದ ಸದಸ್ಯರಲ್ಲಿ ಮುಂದಾಳುತ್ವದ ಲಕ್ಷಣಗಳು ಅಂಕುರಿಸಲು ಸಹಕಾರಿ ಆಯಿತು. ಸದಸ್ಯರಿಗೆ ಹೊಸ ವಿಷಯಗಳು ಅರಿವಾದಂತೆ ಅವರಿಗೆ ಈ ಬಗ್ಗೆ ಮೊದಲು ತಮಗೆ ಇದ್ದ ಅಜ್ಞಾನ ಸ್ವಯಂ ವೇದ್ಯವಾಗುತ್ತಿತ್ತು.

ಗೋಷ್ಠಿಯ ಸದಸ್ಯರಲ್ಲಿ ಅನೇಕರು ಸ್ವಾತಂತ್ರ್ಯ ಚಳುವಳಿ ನಡೆದಾಗ ಇನ್ನೂ ಮಕ್ಕಳು. ಅದರಿಂದ ಅವರಿಗೆ ಸ್ವಾತಂತ್ರ್ಯ

ಸಂಗ್ರಾಮದ ಪರಿಚಯವಿರಲಿಲ್ಲ. ಆದಕಾರಣ ಆ ಪುಸ್ತಕ ಅವರಿಗೆ ಸ್ವಾರಸ್ಯವಾಗಿಯೂ ಮತ್ತು ರೋಮಾಂಚಕಾರಿಯೂ ಆಗಿತ್ತು. ಆಗಾಗ್ಗೆ ಕೆಲವು ಮುಖ್ಯವಾದ ಉಕ್ತಿಗಳನ್ನು ಸದಸ್ಯರು ಗುರುತುಹಾಕಿಕೊಳ್ಳುತ್ತಿದ್ದರು. ಅಂತಹ ಒಂದು ಉಕ್ತಿಯನ್ನು ಕೆಳಗೆ ಕೊಟ್ಟಿದೆ.

'ಸ್ನೇಹಿತ ನಂಬಿಕೆಗೆ ಅರ್ಹನಲ್ಲದಿರಬಹುದು. ಆದರೂ ಆತನನ್ನು ನಂಬೋಣ. ಶತ್ರು ನಮಗೆ ನೋವನ್ನುಂಟು ಮಾಡಬಹುದು. ಪ್ರತಿಯಾಗಿ ನಾವು ಆತನನ್ನು ಕ್ಷಮಿಸೋಣ. ಸ್ನೇಹಿತ ವಿಶ್ವಾಸಘಾತುಕನಿರಬಹುದು. ಆದರೂ ನಾವು ಆತನಿಗೆ ನೆರವು ನೀಡೋಣ. ಆಗ ಮಾತ್ರ ನಮ್ಮಲ್ಲಿರುವ ದೈವೀಗುಣ ಹೊರಹೊಮ್ಮಿ ಪ್ರಕಾಶಮಾನವಾಗುವುದು.'

ಅಧ್ಯಯನಕ್ಕೆ ತೆಗೆದುಕೊಂಡ ಎರಡನೆಯ ಪುಸ್ತಕ 'ವಿವೇಕಾನಂದರ ಜೀವನ ಚರಿತ್ರೆ.' ಗೋಷ್ಠಿಯ ಸದಸ್ಯರಲ್ಲಿ ಬಹುಮಂದಿ ಪದವೀಧರರು ಮತ್ತು ಸ್ನಾತಕೋತ್ತರರು. ಆದರೂ ಅವರಿಗೆ ವಿವೇಕಾನಂದರ ಬಗ್ಗೆ ಹೆಚ್ಚಿನ ಅಜ್ಞಾನ ವಿತ್ತು. ಅವರು ಪುಸ್ತಕದ ವ್ಯಾಸಂಗವನ್ನು ಮುಂದುವರಿಸು ತ್ತಿದ್ದಂತೆ ವಿವೇಕಾನಂದರ ಬಗ್ಗೆ ಹೊಂದಿದ್ದ ಅಜ್ಞಾನಕ್ಕೆ ಬಹು ವಾಗಿ ಪಶ್ಚಾತ್ತಾಪಪಟ್ಟರು. ಈ ತೆರನಾದ ಅಧ್ಯಯನ ಗೋಷ್ಠಿ ಒಂದು ವರ್ಷಕಾಲ ನಡೆಯಿತು. ಅದು ಹೆಚ್ಚು ಉಪಯೋಗಕರವಾಗಿ ಕಂಡುಬಂದಿತು. ಅದರಿಂದ ಬೊಂಬಾಯಿ ನಗರ ಸಮಾಜ ಶಿಕ್ಷಣ ಸಮಿತಿ ಆ ತೆರನಾದ 45 ಅಧ್ಯಯನ ಗೋಷ್ಠಿಗಳನ್ನು ವ್ಯವಸ್ಥೆ ಮಾಡಿತು. ಇಂತಹ ಗೋಷ್ಠಿ ಗಳಿಂದ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶವಿದೆ.

ಗೋಷ್ಠಿಯ ಸದಸ್ಯರಿಗೆ ಹೆಚ್ಚಿನ ಜ್ಞಾನಾರ್ಜನೆಯಾಗುವುದು. ವಿಚಾರ ಪ್ರವೃತ್ತಿ ಬೆಳೆಯುವುದು. ಇಂದಿನ ಪರಿಸ್ಥಿತಿಯಲ್ಲಿ ಮೇಲೆ ತಿಳಿಸಿದಂತಹ ಗೋಷ್ಠಿಗಳ ಅವಶ್ಯಕತೆ ಹೆಚ್ಚಾಗಿದೆ. ಜನ ವಿದ್ಯಾವಂತರಿರಬಹುದು. ಇಲ್ಲವೆ ನವಸಾಕ್ಷರರಿರಬಹುದು. ಪ್ರಕಾಂಡ ಪಂಡಿತರೂ ಆಗಿರಬಹುದು. ಆದರೆ ಯಾರೂ ಸರ್ವಜ್ಞರಲ್ಲ. 'ಸರ್ವರೊಳೊಂದೊಂದು ನುಡಿಗಲಿತು ವಿದ್ಯೆಯ ಪರ್ವತ'ನಾದವನು ಸರ್ವಜ್ಞ. ಹೀಗಿರುವಾಗ ಯಾರೂ ಪರಿಪೂರ್ಣರಲ್ಲ. ತಿಳಿಯಬೇಕಾದುದು ಅನಂತವಾಗಿದೆ. ಇಂದಿನ ಜ್ಞಾನ ಸ್ಫೋಟನಾ ಯುಗದಲ್ಲಿ ಜ್ಞಾನಾರ್ಜನೆ ಜೀವನ ಪರ್ಯಂತ ಸಾಗಿದರೂ ಸಹ ಪೂರೈಸದು. ಮದರಾಸು ಗ್ರಂಥಾಲಯ ಸಂಘವು 1930ರಲ್ಲಿ ಪುಸ್ತಕ ವಾಚನ ಪ್ರಯೋಗವನ್ನು ಕೈಗೊಂಡಿತು. ಅದು ಪರಿಣಾಮಕಾರಿಯಾದ ಕಾರ್ಯಕ್ರಮವೆಂದು ತಿಳಿದುಬಂದಿದೆ. ರಷ್ಯದಲ್ಲೂ ಸಹ 'ರೆಡ್‌ಕಾರ್ನರ್' ಗಳಲ್ಲಿ ಪತ್ರಿಕೆಗಳನ್ನು ಓದುವ ವ್ಯವಸ್ಥೆಯಿತ್ತು. ಆ ಕಾರ್ಯಕ್ರಮಕ್ಕೆ ಹಾಜರಾಗುತ್ತಿದ್ದ ಅನೇಕ ನಿರಕ್ಷರಕುಕ್ಷಿಗಳು ಈ ತೆರನಾದ ಏರ್ಪಾಡಿನಿಂದ ಪ್ರೇರಿತರಾಗಿ ಓದುಬರಹ ಕಲಿಯಲು ಪ್ರಾರಂಭಿಸಿದರು.

ಭಾರತದಲ್ಲಿ ಜ್ಞಾನಪ್ರಸಾರ ಮೌಖಿಕವಾಗಿ ನಡೆದು ಬಂದ ಪರಂಪರೆ ಇದೆ. ಅದು ಪ್ರಾರಂಭದಲ್ಲಿ ಧಾರ್ಮಿಕ ಸ್ವರೂಪ ತಾಳಿತ್ತು. ಪುರಾಣ ಪ್ರವಚನಗಳ ಮೂಲಕ ಜ್ಞಾನ ಪ್ರಸಾರ ನಡೆಯುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯ. ಇಂದಿಗೂ ಈ ವ್ಯವಸ್ಥೆಯನ್ನು ಅನೇಕ ಕಡೆಗಳಲ್ಲಿ ಕಾಣಬಹುದು. ಕುಲ್‌ಸುಮ್ ಸಯಾನಿಯ ಅಜ್ಜಿಯ ಅನುಭವ ಈ ಅಂಶವನ್ನು ಸ್ಪಷ್ಟೀಕರಿಸದೆ ಇರಲಾರದು. ಕಥೆ ಹೇಳುವುದರಲ್ಲಿ ನಿಷ್ಣಾತರಾದವರು

ಅವರ ಹಳ್ಳಿಗೆ ಬಂದು 3-4 ದಿನಗಳ ಕಾಲ ತಂಗುತ್ತಿದ್ದರು. ಅವರು ರಾಮಾಯಣಕ್ಕೆ ಸಂಬಂಧಪಟ್ಟ ಕಥೆಗಳನ್ನು ಸ್ವಾರಸ್ಯವಾಗಿ ಹೇಳುತ್ತಿದ್ದರು. ಇಡೀ ಗ್ರಾಮದ ಜನರು ಕಥೆಯನ್ನು ಕೇಳಲು ಒಟ್ಟಾಗಿ ಸೇರುತ್ತಿದ್ದರು. ಕಥೆಗಳನ್ನು ಕೇಳಲು ಸೇರುತ್ತಿದ್ದವರು ಅಕ್ಷರಸ್ಥರೇನಲ್ಲ. ಆದರೆ ಅವರು ಅವಿದ್ಯಾವಂತರು ಎಂದು ಹೇಳುವಂತಿಲ್ಲ. ರಾಮಾಯಣದ ಜೊತೆಗೆ ಮಹಾಭಾರತ, ಕಬೀರ್ ಮತ್ತು ಮಹಮದ್ ಪೈಗಂಬರ್ ಕಥಾವಸ್ತುಗಳಾಗಿದ್ದುವು. ಕಥೆಯನ್ನು ಕೇಳಿ 'ಇದ್ದರೆ ಸೀತೆಯಂತಹ ಮಗಳಿರಬೇಕು, ರಾಮನಂತಹ ಮಗನಿರಬೇಕು' ಎಂಬುದಾಗಿ ಸಭಿಕರು ತಮ್ಮತಮ್ಮಲ್ಲೇ ಹೇಳಿಕೊಳ್ಳುತ್ತಿದ್ದರು. ಇಂತಹ ಉದಾತ್ತ ಭಾವನೆಗಳು ನಮ್ಮಲ್ಲಿ ರಕ್ತಗತವಾಗಿ ಬೇರೂರಿರುವುದು ನಮ್ಮ ಸಂಸ್ಕೃತಿಯ ಪ್ರತೀಕ.

ಕಥೆ ಹೇಳಿದವರಿಗೆ ಪ್ರತಿಯೊಂದು ಮನೆಯವರು ಸಾಮಾನ್ಯವಾಗಿ ಒಂದು ಹಿಡಿ ಅಕ್ಕಿ ಇಲ್ಲವೆ ಗೋಧಿಯನ್ನು ನೀಡುತ್ತಿದ್ದರು. ಅದರಿಂದ ಅವರ ಜೀವನ ಸಾಗುತ್ತಿತ್ತು. 'ನಿತ್ಯಯಾತ್ರೆ' ಎಂಬುದು ನಮ್ಮಲ್ಲಿದ್ದ ಪದ್ಧತಿ. ಅನುಭಾವಿಗಳು, ಹರಿದಾಸರು ಮತ್ತು ಕೀರ್ತನಕಾರರು ಕೀರ್ತನೆಗಳನ್ನು ಇಂಪಾಗಿ ಹಾಡಿಕೊಂಡು ಮನೆಯಿಂದ ಮನೆಗೆ ಹೋಗುವ ವಾಡಿಕೆಯಿತ್ತು. ಈ ರೀತಿಯಾಗಿ ಸಾಮಾನ್ಯ ಜನತೆಯಲ್ಲಿ ಜ್ಞಾನ ಪ್ರಸಾರವಾಗುತ್ತಿತ್ತು. ಗೃಹಿಣಿಯರು ಅಂತಹವರಿಗೆ ಒಂದು ಹಿಡಿ ಅಕ್ಕಿಯನ್ನು ನೀಡುತ್ತಿದ್ದುದು ಸರ್ವೇಸಾಮಾನ್ಯವಾದ ದೃಶ್ಯ. ಇಂದು ಅದು ಜೀವನೋಪಾಯಕ್ಕೆ ಸುಲಭಮಾರ್ಗವಾಗಿ 'ನಿತ್ಯಯಾತ್ರೆ' ವೃತ್ತಿಯು ಗೌರವವನ್ನೇ ಹಾಳುಮಾಡಿದೆ.

ಕಲಿಯುದವನ ಜೊತೆ ಕಲಿತವನದು : (Each one Teach one) 1945ರಲ್ಲಿ ವಾರ್ಧಾವಲ್ಲಿ ನಡೆದ ಪ್ರಾಥಮಿಕ ಶಿಕ್ಷಣ ಪರಿಷತ್ತಿನಲ್ಲಿ ಕುಲ್‌ಸುಮ್‌ಸಯಾನಿ ಭಾಗವಹಿಸಿದಳು. ವಾರ್ಧಾ ಆಶ್ರಮದಲ್ಲಿದ್ದ ಬಾಪೂಜಿ ಕುಲ್‌ಸುಮ್ ಸಯಾನಿ ಯನ್ನು ಆದರದಿಂದ ಬರಮಾಡಿಕೊಂಡರು. ಜಾನಕಿದೇವಿ ಬಜಾಜರಿಗೆ ಗಾಂಧೀಜಿ ಕುಲ್‌ಸುಮ್ ಸಯಾನಿಯನ್ನು ಪರಿ ಚಯ ಮಾಡಿಕೊಟ್ಟರು. ಜೊತೆಗೆ ಆಕೆಯ ಯೋಗಕ್ಷೇಮ ವನ್ನು ಜಾನಕೀದೇವಿ ಬಜಾಜರಿಗೆ ವಹಿಸಿಕೊಟ್ಟರು. ಜಾನಕಿ ದೇವಿ ಬಜಾಜ್ ಕುಲ್‌ಸುಮ್ ಸಯಾನಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮನೆಯಲ್ಲಿ ಜಾನಕಿದೇವಿ ಬಜಾಜರು ಕುಲ್‌ಸುಮ್ ಸಯಾನಿಯವರೊಡನೆ ಮಾತನಾಡು ತ್ತಿರುವಾಗ ಗೋಷಾ ಮಹಿಳೆಯರ ಸಭೆಯನ್ನು ಕೂಡಿಸುವ ಬಗ್ಗೆ ತನಗಿದ್ದ ತೊಂದರೆಗಳನ್ನು ತೋಡಿಕೊಂಡರು. ಸಭೆಗೆ ಇಬ್ಬರಿಗಿಂತ ಹೆಚ್ಚು ಮಂದಿ ಹಾಜರಾಗದಿದ್ದುದು ಆಕೆಯ ಅನುಭವವಾಗಿತ್ತು.

ಒಂದು ದಿನ ಕುಲ್‌ಸುಮ್ ಸಯಾನಿ ವಾರ್ಧಾವಲ್ಲಿದ್ದ ಬಾಲಕಿಯರ ಶಾಲೆಗೆ ಹೋದಳು. ಆಗ ಶಾಲೆ ಮುಗಿಯುವ ಸಮಯ. ಶಾಲೆಯಲ್ಲಿ ಕೇವಲ 12 ಮಂದಿ ಬಾಲಿಕೆಯರಿದ್ದರು. ಅವರು ಕುಲ್‌ಸುಮ್ ಸಯಾನಿಯೊಡನೆ ಸಂಭಾಷಣೆ ಮಾಡು ತ್ತಿದ್ದಾಗ ಬಾಲಿಕೆಯರು 'ರಹಬರ್' ಪತ್ರಿಕೆಯಲ್ಲಿ ಪ್ರಕಟ ವಾಗಿದ್ದ ಕಾಳಿದಾಸನ ಕಥೆಯನ್ನು ತಿಳಿಯಲು ಕುತೂಹಲ ತೋರಿಸಿದರು. ಜೊತೆಗೆ ಆ ಪತ್ರಿಕೆಯ ಪ್ರತಿಗಳನ್ನು ಬೇಡಿದರು. ಕುಲ್‌ಸುಮ್ ಸಯಾನಿ ಅವರ ಒತ್ತಾಯಕ್ಕೆ ಒಂದು ಕರಾರಿನ

ಮೇಲೆ ಮಣಿಯಬೇಕಾಯಿತು. ಅದೇನೆಂದರೆ ಬಾಲಕಿಯರು ತಮ್ಮ ತಾಯಂದಿರನ್ನು ಮೂರನೆಯ ದಿನದ ಸಭೆಗೆ ಕಳುಹಿಸಿ ಕೊಡಬೇಕಿತ್ತು. ಆ ಸವಾಲಿಗೆ ಹೆಣ್ಣುಮಕ್ಕಳು ಒಪ್ಪಿದರು. ಬಾಲಿಕೆಯರು ಮನೆಗೆ ಹೋದನಂತರ ತಮ್ಮ ತಾಯಂದಿರನ್ನು ವಿವಿಧ ರೀತಿಗಳಲ್ಲಿ ಒಲಿಸಿಕೊಂಡರು. ತಾಯಿಯ ಮುಂದೆ ಅತ್ತು ಅವರನ್ನು ಒಲಿಸಿಕೊಂಡವರು ಕೆಲವರು. ಬೆದರಿಕೆ ಹಾಕಿದವರು ಹಲವರು. ಒಳ್ಳೆಯ ಮಾತಿನಿಂದ ಒಲಿಸಿಕೊಂಡವರು ಇನ್ನು ಕೆಲವರು. ಅಂತೂ ಒಟ್ಟಿನಲ್ಲಿ ಮೂರನೆಯ ದಿನ ಸಭೆಗೆ ಹಾಜರಾದವರ ಸಂಖ್ಯೆ 60. ಆ ಮಹಿಳೆಯರು ತಮ್ಮ ಮಕ್ಕಳ ಒತ್ತಾಯಕ್ಕೆ ಮಣಿದು ಸಭೆಗೆ ಬಂದಿರುವುದಾಗಿ ತಿಳಿಸಿದರು. ಒಟ್ಟಿನಲ್ಲಿ ಬಾಲಿಕೆಯರ ಪ್ರಯತ್ನ ಮೆಚ್ಚುವಂತಹುದು. ಅನೇಕ ವೇಳೆ ಹಿರಿಯರು ಸಾಧಿಸಲಾಗದ ಕೆಲಸವನ್ನು ಮಕ್ಕಳು ಸಾಧಿಸುವುದು ಪ್ರಶಂಸನೀಯ ಸಂಗತಿ.

ಕುಲ್‌ಸುಮ್ ಸಯಾನಿಯಿಂದ ಶಾಲಾಬಾಲಕಿಯರು 'ರಹಬರ್' ಪತ್ರಿಕೆಯನ್ನು ಪಡೆದರಷ್ಟೆ. ಅದರಲ್ಲಿ ಅಚ್ಚಾಗಿದ್ದ ಕಾಳಿದಾಸನ ಕಥೆಯನ್ನು ಶಾಲಾಮಕ್ಕಳು ಅವರ ತಾಯಂದಿರಿಗೆ ಓದಿ ಹೇಳಿದರು. ತಾಯಂದಿರು ಓದು ಬರಹ ಕಲಿಯುವಂತೆ ಪ್ರಚೋದಿಸಿದರು. ವಯಸ್ಸಾದ ಮಹಿಳೆಯರು ಮಕ್ಕಳ ಮುಗ್ಧಮಾತಿಗೆ ಮಾರುಹೋದರು. ತತ್ಫಲವಾಗಿ ಅವರು ತಮ್ಮ ಕೈಬೆರಳುಗಳಿಂದ ಬೂದಿ ಅಥವಾ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಲು ಪ್ರಾರಂಭಿಸಿದ್ದು ಪ್ರೋತ್ಸಾಹಕರವಾದ ದೃಶ್ಯವಾಗಿತ್ತು. ಅವರು ಒಂದು ವರ್ಷದಲ್ಲಿ 'ರಹಬರ್' ಪತ್ರಿಕೆಯನ್ನು ಓದುವಮಟ್ಟಿಗೆ ಓದುಬರಹಕಲಿತರು. ಅದಕ್ಕಾಗಿ ಪ್ರತಿ ನಿತ್ಯ ಹೆಣ್ಣು ಮಕ್ಕಳಿಗೆ ಆದ ಶ್ರಮವೆಷ್ಟು? ಕೇವಲ 15

ನಿಮಿಷ ಮಾತ್ರ. ಈ ಯೋಜನೆ ಯಶಸ್ವಿಯಾದ ಕಾರಣ ಗಾಂಧಿಸ್ಮಾರಕ ನಿಧಿಯಿಂದ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ನಡೆಸಲು ನಿರ್ಧರಿಸಲಾಯಿತು.

1966ರಲ್ಲಿ ಬೊಂಬಾಯಿನಗರ ಸಮಾಜ ಶಿಕ್ಷಣ ಸಮಿತಿ ಕಲಿಯದವನ ಹೊಣೆ ಕಲಿತವನದು ಎಂಬ ಯೋಜನೆಯನ್ನು ತೀವ್ರತೆರನಾಗಿ ಪ್ರಾರಂಭಿಸಿತು. ಪ್ರಾಥಮಿಕಶಾಲೆ, ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಆ ಯೋಜನೆಯಲ್ಲಿ ಪಾಲು ಗೊಂಡರು. ಜನತೆಯನ್ನು ಈ ಕಾರ್ಯದಲ್ಲಿ ಪಾಲುಗೊಳ್ಳುವಂತೆ ಹುರಿದುಂಬಿಸಲು ಖಾಸಗಿಸಮಿತಿಗಳು ರಚನೆಯಾದವು. ಆ ಸಮಿತಿಗಳ ಸಂಚಾಲಕರಾಗಿ ಆಯಾ ಸ್ಥಳದ ಶಾಲೆಯ ಮುಖ್ಯೋಪಾಧ್ಯಾಯರು ಸೇವೆ ಸಲ್ಲಿಸಿದರು. ಈ ಯೋಜನೆಯ ಪ್ರಕಾರ 1966 ರಿಂದ 1972ರ ವರೆಗೆ 31,000 ಮಂದಿ ವಯಸ್ಕರು ಓದು ಬರಹ ಕಲಿತಿರುವುದಾಗಿ ತಿಳಿದು ಬಂದಿದೆ.

ಬೊಂಬಾಯಿ ನಗರ ಸಮಾಜ ಶಿಕ್ಷಣ ಸಮಿತಿ ಮಹಾ ರಾಷ್ಟ್ರ ಸರಕಾರದಿಂದ ಶೇಕಡ 60 ಭಾಗ ಅನುದಾನವನ್ನು ಪಡೆಯುತ್ತಿದೆ. ಉಳಿದ ಶೇಕಡ 40 ಭಾಗ ಚಂದಾ ಹಣ ವನ್ನು ಸಮಿತಿ ಕೂಡಿಸಬೇಕು. ಶಾಲಾವಿದ್ಯಾರ್ಥಿಗಳನ್ನು ಚಂದಾ ವಸೂಲು ಮಾಡುವ ಕಾರ್ಯದಲ್ಲಿ ತೊಡಗುವಂತೆ ಮಾಡುವುದು ಒಂದು ಮಾರ್ಗ. ವಿದ್ಯಾರ್ಥಿ ಸ್ವಯಂ ಸೇವಕರು "ಕಲಿಯದವನ ಹೊಣೆ ಕಲಿತವನದು" ಎಂಬ ಕಾರ್ಯಕ್ರಮದಲ್ಲಿ ನಿರತರಾಗುವರು ಎಂದು ಮೇಲೆ ಹೇಳಿದೆಯಷ್ಟೆ. ಜೊತೆಗೆ ಅವರು ಸಮಿತಿಯ ಚಂದಾ ವಸೂಲಿಯಲ್ಲೂ ಸಹ ತೊಡಗುವರು. ಹಾಗೆ ಹೆಚ್ಚಿನ ಚಂದಾ ಕೂಡಿಸುವ ಶಿಕ್ಷಣ

ಸಂಸ್ಥೆಗೆ ಪರ್ಯಾಯ ಪಾರಿತೋಷಕವನ್ನು ನೀಡಿ ಗೌರವಿಸುವ ವ್ಯವಸ್ಥೆಯನ್ನು ಸಮಿತಿ ಕೈಕೊಂಡಿದೆ. ಯೋಜನೆಯ ಯಶಸ್ಸಿಗೆ ವಿದ್ಯಾರ್ಥಿಗಳು ಮನಸ್ಸು ಮಾಡಿದಲ್ಲಿ ಅದು ನಿಜವಾಗಿಯೂ ಯಶಸ್ವಿಯಾಗಬಲ್ಲದು ಎಂಬ ದೃಢ ನಂಬಿಕೆ ಮತ್ತು ವಿಶ್ವಾಸ ವನ್ನು ಮಹಾರಾಷ್ಟ್ರದ ವಿದ್ಯಾ ಇಲಾಖೆಯ ನಿರ್ದೇಶಕರು ವ್ಯಕ್ತಪಡಿಸಿರುವರು

ಸೇವೆಗೆ ಸೂಕ್ತ ಪುರಸ್ಕಾರ : ಕುಲ್‌ಸುಮ್‌ಸಯಾನಿಗೆ ನೆಹರು ಸಾಕ್ಷರತಾ ಪಾರಿತೋಷಕ ದೊರೆತಿರುವ ವಿಷಯವನ್ನು ಹಿಂದೆಯೇ ತಿಳಿಸಿದೆ. ಆ ಸಂದರ್ಭದಲ್ಲಿ ಆಕೆಯನ್ನು ಗೌರವಿಸಲು 24–6–70ರಂದು ಬೊಂಬಾಯಿ ನಗರ ಸಮಾಜ ಶಿಕ್ಷಣ ಸಮಿತಿ ಒಂದು ಸಭೆಯನ್ನು ಕೂಡಿಸಿತು. ಆ ಸಮಾ ರಂಭ ನಿಜವಾಗಿಯೂ ಚಿರಸ್ಮರಣೀಯವಾದುದು. ಕಾರಣ, ಆಗ ಆಕೆ ಪ್ರತಿವರ್ಷವೂ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ಬಹುಮಾನ ನೀಡಲು 2000 ರೂಪಾಯಿಗಳನ್ನು ದಾನಮಾಡಿದಳು. ಆ ನಿಧಿಯಿಂದ ಪ್ರತಿವರ್ಷವೂ 'ಕುಲ್‌ಸುಮ್ ಜಾನ್ ಮಹಮದ್ ಸಯಾನಿ' ಸಾಕ್ಷರತಾ ಪಾರಿತೋಷಕವನ್ನು ಕೊಡುವ ವ್ಯವಸ್ಥೆಯಿದೆ.

ಸೇವಾಕ್ಷೇತ್ರ ವಿಸ್ತರಣೆ : ವರ್ಷಗಳು ಕಳೆದಂತೆ ಕುಲ್‌ಸುಮ್‌ಸಯಾನಿಯ ಕ್ಷೇತ್ರ ವಿಸ್ತಾರವಾಯಿತು. 1943ರಲ್ಲಿ ಆಕೆ ಅಖಿಲ ಭಾರತ ಮಹಿಳಾ ಸಮ್ಮೇಳನದ ಗೌರವ ಕಾರ್ಯ ದರ್ಶಿನಿಯಾಗಿ ನೇಮಕವಾದಳು. ಮರುಸಾಲಿನಲ್ಲಿ ಆದರ ಪ್ರಧಾನ ಕಾರ್ಯದರ್ಶಿಸ್ಥಾನವನ್ನು ಅಲಂಕರಿಸುವ ಸದವಕಾಶ ದೊರೆಯಿತು. ಮಹಿಳಾ ಸಮ್ಮೇಳನದ ಹಲವಾರು ಕಾರ್ಯ ಕ್ರಮಗಳಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವೂ ಒಂದು

ಕುಲ್‌ಸುಮ್ ಸಯಾನಿ ಭಾರತದ ವಿವಿಧ ಭಾಗಗಳಲ್ಲಿ ಪ್ರವಾಸ ಮಾಡಿ ಮಹಿಳಾ ಸಂಘಗಳಿಗೆ ಭೇಟಿಯಿತ್ತಳು. ಅವು ವಯಸ್ಕರ ಶಿಕ್ಷಣದ ಕಾರ್ಯಕ್ರಮಗಳನ್ನು ಕಾರ್ಯಗತಮಾಡುವಂತೆ ಪ್ರೋತ್ಸಾಹಿಸಿದಳು.

ಭಾರತ ಸರಕಾರ ಮಹಿಳಾ ಶಿಕ್ಷಣದ ಬಗ್ಗೆ 1958ರಲ್ಲಿ ರಾಷ್ಟ್ರೀಯ ಸಮಿತಿಯನ್ನು ರಚಿಸಿತು. ಆ ಸಮಿತಿಯ ಸದಸ್ಯರ ಸಂಖ್ಯೆ 7. ಅವರ ಪೈಕಿ ಕುಲ್‌ಸುಮ್ ಸಯಾನಿ ಒಬ್ಬಳು. ಆ ಸಮಿತಿಯ ಅಧ್ಯಕ್ಷಿಣಿ ಡಾ॥ ದುರ್ಗಾಬಾಯಿ ದೇಶಮುಖ್. ಗುಜರಾತು, ಸೌರಾಷ್ಟ್ರ, ಮರಾಠವಾಡ, ವಿದರ್ಭ ಮತ್ತು ಮುಂಬಯಿ ಪ್ರದೇಶಗಳಲ್ಲಿ ಮಹಿಳೆಯರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯವನ್ನು ಕುಲ್‌ಸುಮ್ ಸಯಾನಿಗೆ ವಹಿಸಲಾಯಿತು. ಆ ಸಂದರ್ಭದಲ್ಲಿ ಹಲವಾರು ಶಿಕ್ಷಣ ತಜ್ಞರನ್ನು ಭೇಟಿಮಾಡಿ ವಿಚಾರ ವಿನಿಮಯಮಾಡಿದಳು. ಅನೇಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿಕೊಟ್ಟಳು. ಹಲವಾರು ಸಭೆಗಳನ್ನು ಉದ್ದೇಶಿಸಿ ಮಾತನಾಡಿದಳು. ಮಹಿಳಾ ಶಿಕ್ಷಣದ ನಾನಾ ಸಮಸ್ಯೆಗಳನ್ನು ಸಂಗ್ರಹ ಮಾಡಿದಳು. ಭಾರತ ಸರಕಾರಕ್ಕೆ ಮಹಿಳಾ ಶಿಕ್ಷಣ ವಿಚಾರದಲ್ಲಿ ಒಳ್ಳೆಯ ವರದಿಯನ್ನು ಕಳುಹಿಸುವುದರಲ್ಲಿ ಹೆಚ್ಚಿನ ನೆರವು ನೀಡಿದಳು

ಕುಲ್‌ಸುಮ್ ಸಯಾನಿ ಆಕಾಶವಾಣಿ, ಹಿಂದೂಸ್ಥಾನಿ ಪ್ರಚಾರ ಸಭೆ, ಭಾರತ ಪಾಕಿಸ್ಥಾನ ಮಹಿಳಾ ಗೆಳೆಯರ ತಂಡ ಮುಂತಾದ ಹಲವಾರು ಸಂಘ ಸಂಸ್ಥೆಗಳಲ್ಲಿದ್ದು, ಸೇವೆಸಲ್ಲಿಸಿರುವಳು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಸೇವೆ: ಉತ್ತಮ ನಿಸ್ವಾರ್ಥ ಸೇವೆಗೆ ಪುರಸ್ಕಾರ ಎಂದಾದರೂ ದೊರೆಯ ಬೇಕಲ್ಲವೆ ? ಚೀನ ಮಹಿಳಾ ಫೆಡರೇಷನ್ನಿನ ಆಹ್ವಾನದ ಮೇಲೆ ಭಾರತ ಸರಕಾರ 1953ರಲ್ಲಿ ಕುಲ್‌ಸುಮ್ ಸಯಾನಿಯ ನೇತೃತ್ವದಲ್ಲಿ ಒಂದು ನಿಯೋಗವನ್ನು ಚೀನಾ ದೇಶಕ್ಕೆ ಕಳುಹಿಸಿತು. ಅದೇ ವರ್ಷ ಕಾರ್ಮಿಕರ ಶಿಕ್ಷಣದ ಬಗ್ಗೆ ನಡೆದ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸುವಂತೆ ಯುನೆಸ್ಕೊ ಆಹ್ವಾನ ನೀಡಿತು. ಈ ವಿಚಾರ ಸಂಕಿರಣ ಸಮಾವೇಶಗೊಂಡಿದ್ದು ಲಾಬ್ರವರೆ ಎಂಬ ಪ್ರದೇಶದಲ್ಲಿ. ಅದೊಂದು ಸುಂದರವಾದ ವನ–ಪ್ಯಾರಿಸ್ ನಗರದಿಂದ ಕೇವಲ 50 ಮೈಲಿ. ರಾಜಮಹಾರಾಜರು ವಾಸಿಸುತ್ತಿದ್ದ ಸ್ಥಳ ಅದು. ಜೊತೆಗೆ ಅವರು ಬೇಟೆಯಾಡುತ್ತಿದ್ದ ಪ್ರದೇಶ. ಪ್ರಶಾಂತ ವಾತಾವರಣ. ನೋಡಲುಸುಂದರಮತ್ತು ರಮಣೀಯ. ಅದನ್ನು ನೋಡಿದ ಭಾರತೀಯನಿಗೆ ಕಾಶ್ಮೀರದ ಪ್ರಕೃತಿ ಸೌಂದರ್ಯ ನೆನಪಾಗುವುದು. ಅಂತಹ ವಾತಾವರಣದಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು ಸೂಕ್ತವೂ ಮತ್ತು ಸಮಂಜಸವೂ ಆಗಿತ್ತು. ಆ ವಿಚಾರ ಸಂಕಿರಣಕ್ಕೆ ದೇಶವಿದೇಶಗಳ ತಜ್ಞರು ಹಾಜರಾಗಿದ್ದರು. ವಿಚಾರ ಸಂಕಿರಣದ ಅವಧಿ ಎರಡು ವಾರ. ಸಮ್ಮೇಳನದಲ್ಲಿ ಕುಲ್‌ಸುಮ್ ಸಯಾನಿ ಸಲ್ಲಿಸಿದ ಸೇವೆಯನ್ನು ಯುನೆಸ್ಕೊ ಮೆಚ್ಚಿಕೊಂಡಿತು. ಆದರ ಪರಿಣಾಮವಾಗಿ ವಿಚಾರ ಸಂಕಿರಣ ನಡೆದ ನಂತರದ ತಜ್ಞರ ಸಭೆಗೆ ಆಕೆಯನ್ನು ಆಹ್ವಾನಿಸಿದ್ದು ಆಕೆಗೆ ಒಂದು ರೀತಿಯಲ್ಲಿ ಸಲ್ಲಿಸಿದ ಗೌರವವೆಂದೇ ಹೇಳಬೇಕು.

1957ರಲ್ಲಿ ಯೂನೆಸ್ಕೊ ವಯಸ್ಕರ ಶಿಕ್ಷಣ ವಿಚಾರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಲಹಾ ಸಮಿತಿಯನ್ನು ನೇಮಿಸಿತು. ಕುಲ್‌ಸುಮ್ ಸಯಾನಿ ಭಾರತದ ಪರವಾಗಿ ಅದರಲ್ಲಿ ಭಾಗವಹಿಸಿದಳು. ಆ ಸಮಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪ್ರತಿನಿಧಿಗಳಿದ್ದುದು ಒಂದು ವಿಶೇಷ. ಸಮಿತಿಯ ಸಭೆ ನಡೆದಿದ್ದು ಕೇವಲ ನಾಲ್ಕು ದಿನಗಳು ಮಾತ್ರ. ಆದರೆ ಅದು ಬಹಳ ಉಪಯುಕ್ತವಾಗಿತ್ತು. ಸಮಿತಿಯ ಸದಸ್ಯರು ಸಭೆಯಲ್ಲಿ ಮನಬಿಚ್ಚಿ ಮಾತನಾಡಲು ಒಳ್ಳೆಯ ಅವಕಾಶ ದೊರೆಯಿತು. ಕೆನಡಾದ ಮಾಂಟ್ರಿಲ್‌ನಲ್ಲಿ ವಿಶ್ವದ ಎರಡನೆಯ ವಯಸ್ಕರ ಶಿಕ್ಷಣ ಸಮ್ಮೇಳನವನ್ನು ನಡಸುವುದೆಂದು ಆ ಸಮಿತಿ ನಿರ್ಧರಿಸಿತು. ಕುಲ್‌ಸುಮ್ ಸಯಾನಿ ವಾಪಸು ಬರುವಾಗ ಜಿನೀವ, ಬಾಗದಾದ್, ಕರಾಚಿ ಮುಂತಾದ ಪ್ರದೇಶಗಳಿಗೆ ಭೇಟಿಯಿತ್ತಳು.

1959ರಲ್ಲಿ ಯೂನೆಸ್ಕೊ ಡೆನ್ಮಾರ್ಕಿನಲ್ಲಿ ಒಂದು ವಿಚಾರ ಸಂಕಿರಣವನ್ನು ನಡೆಸಿತು. ಭಾರತದಿಂದ ಅದರಲ್ಲಿ ಭಾಗವಹಿಸಿದವರ ಪೈಕಿ ಈಕೆ ಒಬ್ಬಳೇ ಮಹಿಳೆ. ಡೆನ್ಮಾರ್ಕಿನ ಜನಜೀವನ ಸುಧಾರಣೆಗೆ ಜನತಾ ಶಾಲೆಗಳು ಕಾರಣ. ಜೊತೆಗೆ ಸಹಕಾರ ಚಳುವಳಿ ಡೆನ್ಮಾರ್ಕಿನ ಪ್ರಗತಿಗೆ ಸಲ್ಲಿಸಿದ ಸೇವೆಯನ್ನು ಕಡೆಗಣಿಸುವಂತಿಲ್ಲ. ಅದು ಆದರ್ಶವಾದದ್ದು. ಅಂತಹ ಸಹಕಾರ ಚಳುವಳಿಯ ಅಧ್ಯಯನವನ್ನು ಮತ್ತು ಜನತಾ ಶಾಲೆಗಳನ್ನು ಸಂದರ್ಶಿಸುವ ಅವಕಾಶವನ್ನು ಈ ವಿಚಾರ ಸಂಕಿರಣ ಒದಗಿಸಿತು. ದೇಶವಿದೇಶಗಳಿಂದ ಆಗಮಿಸಿದ್ದ ವಯಸ್ಕರ ಶಿಕ್ಷಣ ತಜ್ಞರೊಡನೆ ಸಂಪರ್ಕ ಬೆಳಸಿ ಸಮಾಲೋಚಿಸುವ ಸುಸಂದರ್ಭವನ್ನು ಈ ವಿಚಾರ ಸಂಕಿರಣವು ದೊರಕಿಸಿತು. ಸಂಕಿರಣದ ಸದಸ್ಯರಲ್ಲಿ

ಪರಸ್ಪರ ಸ್ನೇಹ ಬೆಳೆಯಿತು. ಎಲ್ಲರೂ ವಿಶ್ವಕುಟುಂಬದ ಸದಸ್ಯರೆಂಬ ಭಾವನೆ ಮೂಡಿತು. ವಿಚಾರ ಸಂಕಿರಣದ ಸದಸ್ಯರು ಕುಲ್‌ಸುಮ್ ಸಯಾನಿಗೆ 'ಮದರ್ ಇಂಡಿಯ' ಎಂಬುದಾಗಿ ಅಭಿದಾನ ಮಾಡಿದರು.

1970ರಲ್ಲಿ ಕುಲ್‌ಸುಮ್ ಸಯಾನಿ ವಿಶ್ವದ ಹನ್ನೊಂದು ರಾಷ್ಟ್ರಗಳಲ್ಲಿ ಪ್ರವಾಸ ಕೈಕೊಂಡಳು. ಆ ದೇಶಗಳಲ್ಲಿ ವಯಸ್ಕರ ಶಿಕ್ಷಣದ ಬಗ್ಗೆ ಅಧ್ಯಯನ ಮಾಡುವುದು ಆಕೆಯ ಪ್ರವಾಸದ ಗುರಿ ಆಗಿತ್ತು. ಜೊತೆಗೆ ಭಾರತೀಯ ಸಂಸ್ಕೃತಿ ಮತ್ತು ಮಹಾತ್ಮ ಗಾಂಧೀಜಿಯವರ ತತ್ವಗಳನ್ನು ಅಲ್ಲಿಯ ಜನರಿಗೆ ಮನವರಿಕೆ ಮಾಡಿಕೊಟ್ಟಳು. ಈಜಿಪ್ಟಿನ ಪ್ರಮುಖ ಪತ್ರಿಕೆ 'ಅಲ್‌ಹರಾಂ'. ಲಂಡನ್ನಿನ ಪ್ರಮುಖ ಪತ್ರಿಕೆಗಳ ಪೈಕಿ 'ಇಂಡಿಯ ಟೈಮ್ಸ್' ಒಂದು ದಿನಪತ್ರಿಕೆ. ಅವು ಕುಲ್‌ಸುಮ್ ಸಯಾನಿಯ ಸೇವೆಯನ್ನು ಮುಕ್ತ ಕಂಠದಿಂದ ಹೊಗಳಿದವು.

ಪಾಕೀಸಾನ ದ್ವೇಷಾಗ್ನಿ ಕುಂಡದಲ್ಲಿ ಜನಿಸಿದ ರಾಷ್ಟ್ರ. ಆದರೆ ಅಂದಿನ ದ್ವೇಷವನ್ನು ಮರೆತು ಭಾರತದೊಡನೆ ಸಹೋದರ ಭಾವನೆಯಿಂದ ಬಾಳಬೇಕೆಂಬುದು ಆಕೆಯ ಆಶಯ. ಈ ಆಸೆ ನೆರವೇರಲು ಕುಲ್‌ಸುಮ್ ಸಯಾನಿ ತನ್ನ ಪಾಲಿನ ಕಾಣಿಕೆಯನ್ನು ಸದಾ ಸಲ್ಲಿಸಲು ಸಿದ್ಧ.

ಕುಲ್‌ಸುಮ್ ಸಯಾನಿಗೆ ಭಾರತ ಸರಕಾರ ಅತ್ಯುನ್ನತ ಮಟ್ಟದ 'ಪದ್ಮಶ್ರೀ' ಪ್ರಶಸ್ತಿಯನ್ನಿತ್ತು ಗೌರವಿಸಿರುವ ವಿಷಯವನ್ನು ಆಗಲೇ ತಿಳಿಸಿದೆ. ಆಕೆಗೆ ಈಗ 76ನೆಯ ವರ್ಷ. ಈ ಇಳಿವಯಸ್ಸಿನಲ್ಲೂ ಆಕೆ ಸದಾ ಹಸನ್ಮುಖಿ ಹಾಗೂ ಉತ್ಸಾಹಿ.



ಶ್ರೀಮತಿ ದುರ್ಗಾಬಾಯಿ ದೇಶಮುಖ್

ಪದ್ಮಶ್ರೀ ದುರ್ಗಾಬಾಯಿ ದೇಶಮುಖ್

ಬಾಲ್ಯ ಮತ್ತು ವಿದ್ಯಾಭ್ಯಾಸ: ದುರ್ಗಾಬಾಯಿ ಹುಟ್ಟಿದ್ದು 1909ನೆಯ ಸಾಲಿನ ಜುಲೈ 15ನೆಯ ತಾರೀಖು. ಜನ್ಮಸ್ಥಳ ಆಂಧ್ರಪ್ರದೇಶದ ರಾಜಮಹೇಂದ್ರಿ. ತಂದೆ ಬಿ. ವಿ. ಎನ್. ರಾವ್. ತಾಯಿ ಕೃಷ್ಣವೇಣಮ್ಮ. ಅವರಿಗೆ ಇಬ್ಬರೇ ಮಕ್ಕಳು. ಹಿರಿಯ ಮಗಳೇ ದುರ್ಗಾಬಾಯಿ.

ದುರ್ಗಾಬಾಯಿ ಚಿಕ್ಕಂದಿನಲ್ಲೇ ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ತಿಲಾಂಜಲಿಯಿತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದಳು. ಗಾಂಧೀಜಿಯ ಆಶ್ರಮದಲ್ಲಿದ್ದಾಗ ಆಕೆಗೆ 25 ವರ್ಷ (1934). ಆಗ ಆಕೆ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಗಾಂಧೀಜಿಯ ಆಶೀರ್ವಾದ ಪಡೆದಳು. ಜಿ. ರಾಮಚಂದ್ರರಾವ್ ಒಳ್ಳೆಯ ದೇಶಭಕ್ತರು. ಅವರ ಗುಪ್ತ ನಾಮ 'ಗೋರ'. ದುರ್ಗಾಬಾಯಿ ಅವರಲ್ಲಿ ವ್ಯಾಸಂಗ ಮಾಡಿ ಕಾಶಿ ವಿಶ್ವವಿದ್ಯಾನಿಲಯದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತು ತೇರ್ಗಡೆಯಾದಳು. ಸಸ್ಯಶಾಸ್ತ್ರದಲ್ಲಿ ಆಕೆಗೆ ಹೆಚ್ಚು ಅಂಕಗಳು ಬಂದವು. ಇಂಟರ್‌ಮೀಡಿಯಟ್ ಪರೀಕ್ಷೆ ಯಾದ ನಂತರ ಕಾಶಿ ವಿಶ್ವವಿದ್ಯಾನಿಲಯದ ಬಿ.ಎ. ಪರೀಕ್ಷೆಗೆ ಕೂರಲು ನಿರ್ಧರಿಸಿದಳು. ಆದರೆ ಆ ವಿಶ್ವವಿದ್ಯಾನಿಲಯದ ಅಪ್ಪಣೆ ದೊರೆಯಲಿಲ್ಲ. ಆದ್ದರಿಂದ 1939 ರಲ್ಲಿ ವಾಲ್ಟೈರ್ ವಿಶ್ವವಿದ್ಯಾನಿಲಯದ ಬಿ.ಎ. ಆನರ್ಸ್ ಪರೀಕ್ಷೆಗೆ ಕುಳಿತು

ಮೊದಲನೆಯ ತರಗತಿಯಲ್ಲಿ ತೇರ್ಗಡೆಯಾದಳು. ನಂತರ 1940 ರಲ್ಲಿ ಎಂ.ಎ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿ ಅನೇಕ ಪಾರಿತೋಷಕಗಳನ್ನು ಪಡೆದಳು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ರಾಜ್ಯ ಶಾಸ್ತ್ರ ಅಧ್ಯಯನ ಮಾಡಲು ಹಾಗೂ ಇನ್ನರ್‌ಟೆಂಪಲ್‌ನಲ್ಲಿ ಲಾ ಪರೀಕ್ಷೆಗೆ ಕೂರಲು ಅವಕಾಶ ದೊರೆಯಿತು. ಆದರೆ ವಿಶ್ವದ ಎರಡನೆಯ ಮಹಾಯುದ್ಧ ಅಡ್ಡ ಬಂದಿತು. 1942 ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ ಲಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಕೀಲಿ ವೃತ್ತಿಯನ್ನು ಕೈಕೊಂಡಳು. ವಕೀಲಿ ವೃತ್ತಿ ಚೆನ್ನಾಗಿ ನಡೆಯಿತು. ಆಕೆ ಕ್ರಿಮಿನಲ್ ಮೊಕದ್ದಮೆ ಗಳಲ್ಲಿ ಎತ್ತಿದ ಕೈ. ವಿದ್ಯಾಭ್ಯಾಸ ಪಡೆಯಲು ಮನಸ್ಸಿದ್ದಲ್ಲಿ ವಯಸ್ಸು ಅಡ್ಡಿಬರದು. ಅದಕ್ಕೆ ದುರ್ಗಾಬಾಯಿಯ ವಿದ್ಯಾರ್ಥಿ ಜೀವನವೇ ಸಾಕ್ಷಿ.

ಸಾರ್ವಜನಿಕ ಸೇವೆ : ದುರ್ಗಾಬಾಯಿ ಮತ್ತು ಅವಳ ತಾಯಿ ಚಿಕ್ಕವಯಸ್ಸಿನಲ್ಲೇ ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದರು. ಹಿಂದಿ ಭಾಷೆ ಕಲಿತರು. ಖಾದಿ ವಸ್ತ್ರಧಾರಿಗಳಾದರು. 1921 ರಲ್ಲಿ ಕಾಕಿನಾಡದಲ್ಲಿ ಹಿಂದಿ ಬಾಲಿಕ ಪಾಠಶಾಲೆಯನ್ನು ದುರ್ಗಾಬಾಯಿ ಸ್ಥಾಪಿಸಿದಳು. ಹಿಂದಿ, ಸಂಗೀತ, ನೂಲುವುದು ಮತ್ತು ನೇಯುವುದನ್ನು ಕಲಿಸುವುದು ಆ ಶಾಲೆಯ ಉದ್ದೇಶ. ಆ ಶಾಲೆಯಲ್ಲಿ ತಯಾರಾದ ವಿದ್ಯಾರ್ಥಿನಿಯರು ಕಾಕಿನಾಡ ಕಾಂಗ್ರೆಸ್ ಮಹಾಧಿ ವೇಶನದಲ್ಲಿ ಸ್ವಯಂಸೇವಕರಾಗಿ ಒಳ್ಳೆಯ ಸೇವೆ ಸಲ್ಲಿಸಿದ ದಾಖಲೆಯಿದೆ.

ಮೇಲ್ಕಂಡ ಶಾಲೆಗೆ ಹಾಜರಾಗುತ್ತಿದ್ದ ಮಕ್ಕಳ ತಾಯಂದಿರಿಗೆ ಹಿಂದಿ ತರಗತಿ 1937 ರಲ್ಲಿ ಪ್ರಾರಂಭವಾಯಿತು. ಆ ತರಗತಿಗೆ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಹೋಗ ಲಾರಂಭಿಸಿದರು. ಅದೂ ಸಹ ಒಂದು ರೀತಿಯಲ್ಲಿ ವಯಸ್ಕರ ಶಿಕ್ಷಣ ತಾನೆ? ದುರ್ಗಾಬಾಯಿ ದಕ್ಷಿಣ ಭಾರತದಲ್ಲಿ ಹಿಂದೀ ಪ್ರಚಾರಕ್ಕೆ ಹೆಚ್ಚಿನ ಸೇವೆ ಸಲ್ಲಿಸಿರುವಳು. 1944 ರಲ್ಲಿ ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭೆಯ ಘಟಿಕೋತ್ಸವವು ಮಹಾತ್ಮಾಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ಆಕೆಗೆ ಚಿನ್ನದ ಪದಕ ನೀಡಿ ಗೌರವಿಸಲಾ ಯಿತು.

ಮಹಾತ್ಮ ಗಾಂಧೀಜಿಯವರು ಕಾಕಿನಾಡಕ್ಕೆ 1921 ರಲ್ಲಿ ಭೇಟಿಯಿತ್ತರಷ್ಟೆ. ಆಗ ಮಹಿಳೆಯರು ಗಾಂಧೀಜಿಗೆ ನಿಧಿ ಯೊಂದನ್ನು ಅರ್ಪಿಸಲು ನಿರ್ಧರಿಸಿದರು. ಅದಕ್ಕೋಸ್ಕರ ಒಂದು ಸಭೆ ವ್ಯವಸ್ಥೆ ಆಯಿತು. ಅಲ್ಲಿ ಮಹಾತ್ಮ ಗಾಂಧೀಜಿ ಯವರ ಭಾಷಣವನ್ನು ದುರ್ಗಾಬಾಯಿ ತೆಲುಗು ಭಾಷೆಗೆ ತರ್ಜುಮೆ ಮಾಡಿದಳು. ಅಷ್ಟೇ ಅಲ್ಲ. ಆಂಧ್ರ ವಿಭಾಗದ ಪ್ರವಾಸದಲ್ಲಿ ಗಾಂಧೀಜಿಯೊಡನಿದ್ದು ಅವರ ಭಾಷಣಗಳನ್ನು ತೆಲುಗು ಭಾಷೆಗೆ ಭಾಷಾಂತರಿಸುವ ಜವಾಬ್ದಾರಿಯನ್ನು ವಹಿಸಿ ದಳು. ಈ ರಾಜಕೀಯ ಕಾರ್ಯಕ್ರಮಗಳ ಮಧ್ಯೆ ಬಿಡುವು ಮಾಡಿಕೊಂಡು ತೆಲುಗು ಭಾಷೆಯಲ್ಲಿ ಆಗಾಗ್ಗೆ ಕಥೆಗಳನ್ನು ಬರೆದು ಪ್ರಕಟಣೆಗಾಗಿ ನಿಯತಕಾಲಿಕ ಪತ್ರಿಕೆಗಳಿಗೆ ಕಳುಹಿಸು ತ್ತಿದ್ದಳು.

ಮಹಾತ್ಮರ ಆಣತಿಯಂತೆ 1930 ರಲ್ಲಿ ಆಂಧ್ರದಲ್ಲೂ ಸಹ ಉಪ್ಪಿನ ಸತ್ಯಾಗ್ರಹ ಆರಂಭವಾಯಿತು. ವೇದಾರಣ್ಯದಲ್ಲಿ

ಚಕ್ರವರ್ತಿ ರಾಜಗೋಪಾಲಾಚಾರ್ಯರು ಸತ್ಯಾಗ್ರಹದ ಸೂತ್ರ ವಹಿಸಿದ್ದರು. ಆಂಧ್ರದಲ್ಲಿ ಟಿ. ಪ್ರಕಾಶಂ ಮತ್ತು ನಾಗೇಶ್ವರ ರಾವ್ ಅವರು ಸತ್ಯಾಗ್ರಹದ ಮುಂದಾಳುತ್ವವನ್ನು ವಹಿಸಿಕೊಳ್ಳುವಂತೆ ದುರ್ಗಾಬಾಯಿ ಪ್ರಚೋದಿಸಿದಳು. ಟಿ. ಪ್ರಕಾಶಂ ದಸ್ತಗಿರಿಯಾದರು. ಆಗ ಅವರು ಸತ್ಯಾಗ್ರಹ ಮುಂದುವರಿಸುವ ಜವಾಬ್ದಾರಿಯನ್ನು ದುರ್ಗಾಬಾಯಿಗೆ ವಹಿಸಿದರು. ಆಕೆ ಒಂದೇ ಸಮನಾಗಿ 30–40 ದಿನಗಳ ಕಾಲ ಉಪ್ಪಿನ ಸತ್ಯಾಗ್ರಹ ಕೈಕೊಂಡಳು. ಅನಂತರ ಸರಕಾರ ಆಕೆಯನ್ನು ದಸ್ತಗಿರಿ ಮಾಡಿತು. ನ್ಯಾಯಾಲಯ ಆಕೆಗೆ ಒಂದು ವರ್ಷದ ಸೆರೆವಾಸವನ್ನು ವಿಧಿಸಿತು. ಪುನಃ 1932–33 ರಲ್ಲಿ ಏಕಾಂತ ಕಾರಾಗ್ರಹ ಶಿಕ್ಷೆಗೆ ಗುರಿಯಾದಳು. ಭಾರತ ಸರಕಾರ ಇತ್ತೀಚೆಗೆ ಸ್ವಾತಂತ್ರ್ಯಯೋಧರಿಗೆ ತಾಮ್ರ ಪತ್ರವನ್ನು ವಿತರಣೆ ಮಾಡಿ ಗೌರವಿಸಿತಷ್ಟೆ. ಆಗ ಆಕೆಗೂ ತಾಮ್ರಪತ್ರದ ಗೌರವ ದೊರಕಿತು.

ರಾಜಕೀಯ ಜೀವನ: ದುರ್ಗಾಬಾಯಿ 1946 ರಲ್ಲಿ ಭಾರತದ ರಾಜ್ಯಾಂಗ ರಚನಾ ಸಭೆಗೆ ಆಯ್ಕೆಯಾದಳು. ಅಲ್ಲಿ ಹೆಚ್ಚಿನ ದಕ್ಷತೆ ಮತ್ತು ಉತ್ಸಾಹದಿಂದ ಸೇವೆ ಸಲ್ಲಿಸಿದಳು. ಆಕೆಯ ಪ್ರತಿಭೆ ಸರದಾರ್ ಪಟೇಲರ ಗಮನವನ್ನು ಸೆಳೆಯಿತು. ತತ್ಪರಿಣಾಮವಾಗಿ ಸ್ಟಿಯರಿಂಗ್ ಸಮಿತಿಗೆ ಆರಿಸಲ್ಪಟ್ಟ ಸದಸ್ಯರ ಪೈಕಿ ಈಕೆ ಒಬ್ಬಳೇ ಮಹಿಳೆ. ಆ ಸಮಿತಿಯ ಸದಸ್ಯಳಾಗಿ ಸಲ್ಲಿಸಿದ ಸೇವೆ ಎಲ್ಲರ ಮೆಚ್ಚುಗೆ ಪಡೆಯಿತು. ತತ್ಪರಿಣಾಮವಾಗಿ ದುರ್ಗಾಬಾಯಿ ಅಧ್ಯಕ್ಷರ ಪಟ್ಟಿಗೆ ಆಯ್ಕೆಯಾದಳು. 1953 ರಲ್ಲಿ ಭಾರತ ಸರಕಾರದ ಹಣಕಾಸಿನ

ಸಚಿವರಾಗಿದ್ದ ಚಿಂತಾಮಣಿ ದೇಶಮುಖ್‌ರವರೊಡನೆ ವಿವಾಹ ವಾಯಿತು.

ಆಕೆ ರಾಜ್ಯಾಂಗ ರಚನಾಸಭೆಯ ಸದಸ್ಯಳಾಗಿ ಸುಮ್ಮನೆ ಕೂರಲಿಲ್ಲ. ದೆಹಲಿಯಲ್ಲಿ ತೆಲಗು ಮಾತನಾಡುವವರಿಗೆ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದಳು. ಕ್ರಮೇಣ ಅದು ಪ್ರೌಢಶಾಲೆಯಾಗಿ ಬೆಳೆಯಿತು. ಈಗ ಅದೊಂದು ಮಾದರಿ ಪಾಠಶಾಲೆ. ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯನ್ನು ಒಪ್ಪಿಸಿ ದೆಹಲಿಯಲ್ಲಿ ಒಂದು ಕಾಲೇಜನ್ನು ಪ್ರಾರಂಭಿಸಿದಳು.

ಮಹಾತ್ಮ ಗಾಂಧೀಜಿಯವರ ಧರ್ಮಪತ್ನಿ ಕಸ್ತೂರಿಬಾ. ಆಕೆಯ ನಿಧನಾನಂತರ 1940 ರಲ್ಲಿ ಕಸ್ತೂರಿಬಾ ಗಾಂಧಿ ನಿಧಿ ಸಂಗ್ರಹ ವ್ಯವಸ್ಥೆಯಾಯಿತಷ್ಟೆ. ಆಂಧ್ರಪ್ರದೇಶದಲ್ಲಿ ಆ ನಿಧಿಗೆ ಚಂದಾ ಕೂಡಿಸಲು ನಿಯೋಜಿತಳಾದಳು. ಹಾಗೂ ಆ ನಿಧಿಯ ಧರ್ಮದರ್ಶಿನಿಯಾಗಿ ನೇಮಕವಾದಳು.

ಕಾಂಗ್ರೆಸ್ ಹೈಕಮಾಂಡು ದುರ್ಗಾಬಾಯಿಯನ್ನು ಮೊದಲನೆಯ ಲೋಕಸಭಾ ಚುನಾವಣೆಗೆ ಹುರಿಯಾಳನ್ನಾಗಿ ನಿಲ್ಲಿಸಿತು. ಆಕೆ ತನ್ನ ಹುಟ್ಟೂರಿನ ಕ್ಷೇತ್ರದಿಂದ ಸ್ಪರ್ಧಿಸಿದಳು. ಆದರೆ ಆಕೆಗೆ 1929ರಿಂದ ಆ ಕ್ಷೇತ್ರದ ಸಂಪರ್ಕವಿರಲಿಲ್ಲ. ಕಾರಣ ತನ್ನ ಹುಟ್ಟೂರನ್ನು ಬಿಟ್ಟು ತನ್ನ ತಾಯಿಯೊಂದಿಗೆ ಮದರಾಸಿನಲ್ಲಿ ವಾಸಿಸುತ್ತಿದ್ದಳು. ಆಕೆಯ ಎದುರಾಳಿ ಒಬ್ಬ ಕಮ್ಯೂನಿಸ್ಟ್. ಅದರಿಂದ ಆ ಕ್ಷೇತ್ರದಲ್ಲಿ ಸಾಕಷ್ಟು ವಿರೋಧವಿತ್ತು. ಕಾಂಗ್ರೆಸ್ಸಿನ ಅನೇಕ ಮುಂದಾಳುಗಳು ಸಾಕಷ್ಟು ಬೆಂಬಲ ನೀಡಲಿಲ್ಲವಾಗಿ ತಿಳಿದುಬಂದಿದೆ. ಈ ಎಲ್ಲ ಕಾರಣಗಳಿಂದ ಆಕೆ ಚುನಾವಣೆಯಲ್ಲಿ ಸೋತಳು. ಆಕೆ ಚುನಾವಣೆ

ಯಲ್ಲಿ ಗೆದ್ದಿದ್ದರೆ ಪ್ರಾಯಶಃ ಭಾರತ ಸರಕಾರದ ಮಂತ್ರಿಯಾಗುವ ಅವಕಾಶವಿತ್ತು. ಆದರೂ ಆಕೆಯನ್ನು ಕಡೆಗಣಿಸುವಂತಿರಲಿಲ್ಲ. ಆಗಿನ ಪ್ರಧಾನ ಮಂತ್ರಿ ಪಂಡಿತ ಜವಹರಲಾಲ್ ನೆಹರು. ಅವರು 1952ರಲ್ಲಿ ದುರ್ಗಾಬಾಯಿಯನ್ನು ಯೋಜನಾ ಮಂಡಳಿಗೆ ನಾಮಕರಣ ಮಾಡಿದರು. ಆಕೆ ಯೋಜನಾ ಮಂಡಳಿಯಲ್ಲಿ ಪುನರ್ವಸತಿ ಮತ್ತು ಸಾರ್ವಜನಿಕ ಸಹಕಾರ ವಿಭಾಗವನ್ನು ವಹಿಸಿಕೊಂಡಳು. ಅಲ್ಲಿ ಆಕೆಗೆ ಕೈ ತುಂಬ ಕೆಲಸವಿತ್ತು. ಆದರಿಂದ ಬಿಡುವಿಲ್ಲದಂತಾಯಿತು. ಆದರಿಂದ ವಕೀಲ ವೃತ್ತಿಯನ್ನು ತ್ಯಜಿಸಬೇಕಾಯಿತು.

ದುರ್ಗಾಬಾಯಿ ಸಂಘಟನಾ ಚತುರೆ. ಈ ವಿಷಯ ಪ್ರಧಾನಿ ನೆಹರು ಅವರಿಗೆ ತಿಳಿದಿತ್ತು. 1950ರಲ್ಲಿ ಆಂಧ್ರದ ರಾಯಲ್ ಸೀಮೆಯಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿತು. ಅಲ್ಲಿ ಪರಿಹಾರ ಕಾರ್ಯಗಳನ್ನು ವ್ಯವಸ್ಥೆಗೊಳಿಸಲು ದುರ್ಗಾಬಾಯಿ ದೇಶಮುಖ್‌ರವರನ್ನು ಭಾರತ ಸರಕಾರ ನಿಯೋಜಿಸಿತು. ಆಕೆ ತನಗೆ ವಹಿಸಿದ್ದ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸಿದಳು. 1953ರಲ್ಲಿ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಕ್ಷಾಮ ಪರಿಹಾರ ಕೇಂದ್ರಗಳನ್ನು ಏರ್ಪಡಿಸಲು ಪ್ರಧಾನಿ ನೆಹರು ಆಕೆಯನ್ನು ನಿಯೋಜಿಸಿದರು.

1950ರಲ್ಲಿ ಚೀನಾಕ್ಕೆ ವಿಜಯಲಕ್ಷ್ಮಿ ಪಂಡಿತರ ನೇತೃತ್ವದಲ್ಲಿ ಒಂದು ನಿಯೋಗ ಹೊರಟಿತು. ಆ ನಿಯೋಗದ ಸದಸ್ಯರ ಪೈಕಿ ದುರ್ಗಾಬಾಯಿ ಒಬ್ಬಳು. ಆಕೆ ನಿಯೋಗದ ಸದಸ್ಯಳಾಗಿ ತನ್ನ ಪಾಲಿನ ಕೆಲಸವನ್ನು ಚೆನ್ನಾಗಿ ನಿರ್ವಹಿಸಿದಳು.

ಸೇವೆಯ ವಿವಿಧ ಪ್ರಾಕಾರಗಳು: ಮಹಿಳೆಯರ ಕಲ್ಯಾಣದಲ್ಲಿ ನಿರತವಾಗಿದ್ದ ಸಮಾಜ ಕಲ್ಯಾಣ ಸಂಸ್ಥೆಗಳಿಗೆ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಸಾಕಷ್ಟು ನೆರವು ನೀಡುತ್ತಿರಲಿಲ್ಲ. ಈ ವಿಷಯ ದುರ್ಗಾಬಾಯಿಗೆ ಗೊತ್ತಿತ್ತು.

ಸಮಾಜ ಕಲ್ಯಾಣ ಮಂಡಳಿಗಳನ್ನು ರಚಿಸುವಂತೆ ಭಾರತ ಸರಕಾರಕ್ಕೆ ಒತ್ತಾಯ ಹಾಕಿದಳು. ಅಂತೆಯೇ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಸಮಾಜ ಕಲ್ಯಾಣ ಮಂಡಳಿಗಳು ಸ್ಥಾಪನೆಯಾದವು. ಕೇಂದ್ರ ಮಂಡಳಿಗೆ ದುರ್ಗಾಬಾಯಿಯನ್ನು ಅಧ್ಯಕ್ಷಳನ್ನಾಗಿ ಭಾರತ ಸರಕಾರ ನೇಮಕ ಮಾಡಿತು. ಆಕೆ ಈ ಕೆಲಸದ ಜೊತೆಗೆ ಯೋಜನಾ ಮಂಡಳಿಯ ಸದಸ್ಯಳಾಗಿಯೂ ಸಹ ಸೇವೆಸಲ್ಲಿಸುತ್ತಿದ್ದಳು. ಮೊದಲ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಸಮಾಜ ಕಲ್ಯಾಣಕ್ಕೆ 19 ಕೋಟಿ ರೂಪಾಯಿ ಧನ ಸಹಾಯವನ್ನು ಭಾರತ ಸರಕಾರದಿಂದ ಪಡೆದಳು. ಆಕೆ ತನ್ನ ಅಧಿಕಾರದ ಅವಧಿಯಲ್ಲಿ ಕಲ್ಯಾಣ ಮಂಡಳಿಕೆಳಗೆ ಕಂಡಂತೆ ಕೆಲಸ ಮಾಡಲು ವ್ಯವಸ್ಥೆ ಮಾಡಿದಳು.

1) ದೇಶಾದ್ಯಂತ ಹತ್ತು ಸಾವಿರ ಸ್ವಯಂ ಸೇವಾ ಸಮಾಜ ಕಲ್ಯಾಣ ಮಂಡಳಿಗಳು ಸೇವೆ ಸಲ್ಲಿಸುತ್ತಿದ್ದವು. ಅವುಗಳ ಸಮೀಕ್ಷೆ ನಡಸಿ ಅಂತಹ ಸಂಸ್ಥೆಗಳ ಪಟ್ಟಿಯೊಂದನ್ನು ತಯಾರಿಸಲು ಏರ್ಪಾಡು ಮಾಡಿದಳು. ಆ ಸಂಸ್ಥೆಗಳು ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಮಾರ್ಗದರ್ಶನ ನೀಡುತ್ತಿದ್ದಳು.

2) ಭಾರತಾದ್ಯಂತ ಹೊಸದಾಗಿ 30 ಸಾವಿರ ಕಲ್ಯಾಣ ಮಂಡಳಿಗಳು ಸ್ಥಾಪನೆಯಾದವು. ಪ್ರತಿ ಐದು ಹಳ್ಳಿಗೆ ಒಂದು

ಕೇಂದ್ರ. ಅಂತಹ ಒಂದೊಂದು ಕೇಂದ್ರಕ್ಕೆ ಒಬ್ಬೊಬ್ಬ ಗ್ರಾಮ ಸೇವಕಿ, ಒಬ್ಬ ಸೂಲಗಿತ್ತಿ ಹಾಗೂ ಕುಶಲಕಲೆ ಬಲ್ಲವಳೊಬ್ಬಳು; ಈ ರೀತಿ ನೇಮಕವಾದರು. ಜಿಲ್ಲೆಗೊಂದು ಸಮಿತಿ ರಚನೆ ಆಯಿತು. ಪ್ರತಿಭಾವಂತ ಮಹಿಳೆಯರು ಆ ಸಮಿತಿಯ ಸದಸ್ಯರಾಗಿ ನೇಮಕವಾದರು. ಜಿಲ್ಲಾ ಸಮಿತಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಒಂದೊಂದು ವಾಹನ ದೊರಕಿತು.

3) ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ಮೂವತ್ತು ಸಾವಿರ ಮಹಿಳೆಯರಿಗೆ ತರಪೇತು.

4) ಮಹಿಳೆಯರು ಕುಶಲಕಲೆಗಳನ್ನು ಕಲಿಯುವುದರಿಂದ ತಮ್ಮ ಕುಟುಂಬದ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬಹುದು. ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಕೈಗಾರಿಕಾ ಸಹಕಾರ ಸಂಘಗಳು ಸ್ಥಾಪನೆಯಾದವು.

ಹಿಂದೆ ತಿಳಿಸಿದಂತೆ ದುರ್ಗಾಬಾಯಿ ಬಾಲ್ಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದವಳಲ್ಲ. ಆಕೆ ವಯಸ್ಸಾದ ನಂತರ ತನ್ನ ಎಡಬಿಡದ ಕಾರ್ಯಕ್ರಮಗಳ ಮಧ್ಯೆ ವ್ಯಾಸಂಗಮಾಡಿ ಸ್ನಾತಕೋತ್ತರ ಪದವಿ ಪೂರೈಸಿದವಳು. ತನ್ನ ಅನುಭವದ ಹಿನ್ನೆಲೆಯಲ್ಲಿ ಮಹಿಳೆಯರು ಎಸ್. ಎಸ್. ಎಲ್. ಸಿ ವರೆಗೆ ಓದಲು ಕಂಡೆನ್ಸ್ಡ ಕೋರ್ಸನ್ನು ವ್ಯವಸ್ಥೆ ಮಾಡಿದಳು. ಮಹಿಳೆಯರಲ್ಲಿ ಅನೇಕರಿಗೆ ಬಾಲ್ಯದಲ್ಲಿ ಓದಲು ಸೌಕರ್ಯಗಳಿರುವುದಿಲ್ಲ. ಇದ್ದರೂ ಸಾಮಾಜಿಕ ಕಟ್ಟುಪಾಡುಗಳು ಅಡ್ಡಿಬರುವುವು. ವಿವಾಹಿತ ಮಹಿಳೆಯರಲ್ಲಿ ಕೆಲವರು ದುರದೃಷ್ಟವಶಾತ್ ಇಲ್ಲದ ಕಷ್ಟಗಳಿಗೆ ಗುರಿಯಾಗುವ ಸಂಭವವುಂಟು. ಇಲ್ಲವೆ ತಮ್ಮ ಗಂಡಂದಿರನ್ನು ಕಳೆದುಕೊಂಡು ಅನಾಥರಾಗುವರು. ಅಂಥಹ

ವರು ತಮ್ಮ ಜೀವನವನ್ನು ಸಾಗಿಸುವುದು ಬಹಳ ಕಷ್ಟವಾಗುವುದು. ಅಂತಹ ದೌರ್ಭಾಗ್ಯ ಮಹಿಳೆಯರಿಗೆ ಕಂಡೆನ್ಸ್ಡ್ ಕೋರ್ಸು ಒಂದು ವರವಿದ್ದಂತೆ. ಈ ಕೋರ್ಸಿನ ಸೌಲಭ್ಯವನ್ನು ಸುಮಾರು ಐದು ಸಾವಿರ ಮಂದಿ ಮಹಿಳೆಯರು ಉಪಯೋಗಿಸಿಕೊಂಡಿದ್ದಾರೆ. ಈ ಯೋಜನೆ ಇನ್ನೂ ಜಾರಿಯಲ್ಲಿದೆ.

1959ರಲ್ಲಿ ಭಾರತ ಸರಕಾರ ರಚಿಸಿದ ಹೆಣ್ಣುಮಕ್ಕಳ ಮತ್ತು ಮಹಿಳೆಯರ ರಾಷ್ಟ್ರೀಯ ಶಿಕ್ಷಣ ಸಮಿತಿಗೆ ದುರ್ಗಾಬಾಯಿ ಅಧ್ಯಕ್ಷಳಾಗಿ ನೇಮಕವಾದಳು. ಆ ಸಮಿತಿ ಸಭೆ ಸೇರಿ ಮಹಿಳಾ ಶಿಕ್ಷಣದ ಬಗ್ಗೆ 180 ಶಿಫಾರಸುಗಳನ್ನು ಮಾಡಿತು. ಭಾರತ ಸರಕಾರ ಆ ಎಲ್ಲ ಶಿಫಾರಸುಗಳನ್ನು ಅಂಗೀಕರಿಸುವಂತೆ ಒತ್ತಾಯ ಹಾಕಿದಳು. ಆದರಂತೆ ಭಾರತ ಸರಕಾರ ಎಲ್ಲವನ್ನೂ ಅಂಗೀಕರಿಸಿತು. ಅವುಗಳಲ್ಲಿ ಮುಖ್ಯವಾದದ್ದು ಮಹಿಳಾ ಶಿಕ್ಷಣ ರಾಷ್ಟ್ರೀಯ ಸಲಹಾ ಸಮಿತಿಯ ರಚನೆ. ಅದರ ಅಧ್ಯಕ್ಷಳಾಗಿ ದುರ್ಗಾಬಾಯಿ ದೇಶಮುಖ್ 1960 ರಿಂದ 1962 ರವರೆಗೆ ಸೇವೆ ಸಲ್ಲಿಸಿದಳು.

ಆಂಧ್ರ ಮಹಿಳಾಸಭೆ : ದುರ್ಗಾಬಾಯಿ ತನ್ನ ಹೆಸರು ಚಿರಸ್ಥಾಯಿಯಾಗಿರುವಂತಹ ಕೆಲವು ಶೈಕ್ಷಣಿಕ ಸಂಸ್ಥೆಗಳನ್ನು ಹುಟ್ಟುಹಾಕಿರುವಳು. ಅಂತಹ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಪರಿಚಯ ಮಾಡಿಕೊಳ್ಳುವುದರಿಂದ ಆಕೆಯ ಬಹುಮುಖವಾದ ಸೇವೆ ಮತ್ತು ಪ್ರತಿಭೆ ವ್ಯಕ್ತವಾಗುವುದು.

ದುರ್ಗಾಬಾಯಿ ದೇಶಮುಖ್ ಇನ್ನೂ ವಿದ್ಯಾರ್ಥಿನಿಯಾಗಿರುವಾಗಲೇ ಅಂದರೆ 1937ರಲ್ಲಿ ಆಂಧ್ರಮಹಿಳಾಸಭಾ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದಳು. ಇಂದಿಗೂ ಆಕೆ ಆ

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷಿಣಿ. ಪ್ರಾರಂಭದಲ್ಲಿ ಮಕ್ಕಳಿಗೆ ಮನರಂಜನ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದು ಹಾಗೂ ಆ ಕಾರ್ಯಕ್ರಮಗಳನ್ನು ಆಕಾಶವಾಣಿಯ ಮೂಲಕ ಪ್ರಚುರ ಪಡಿಸುವುದು ಆ ಸಂಸ್ಥೆಯ ಉದ್ದೇಶವಾಗಿತ್ತು. ಆಕೆ ಅಷ್ಟ ರಲ್ಲೇ ತೃಪ್ತಳಾಗಲಿಲ್ಲ. ಮಹಿಳೆಯರ ಅಭಿವೃದ್ಧಿ ಆಕೆಯ ಮನಸ್ಸನ್ನು ಸದಾ ಕೊರೆಯುತ್ತಿತ್ತು. ಸಮಾಜದಲ್ಲಿ ಮಹಿಳೆ ಯರ ಪಾತ್ರದ ಬಗ್ಗೆ ಆಕೆಗೆ ಅರಿವಾಗಿತ್ತು. ಮಹಿಳೆಯರಿಗೆ ಸೂಕ್ತ ತಿಳಿವಳಿಕೆ ಮತ್ತು ಮುಖಂಡತ್ವ ವಹಿಸಿದಲ್ಲಿ ಅವರು ಒಳ್ಳೆಯ ಸೇವೆ ಸಲ್ಲಿಸಬಲ್ಲರು ಎಂಬ ದೃಢ ನಂಬಿಕೆಯಿತ್ತು. ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದ ಯೋಧಳಾಗಿದ್ದ ಕಾರಣ ಆಕೆಗೆ ಜನತಾ ಸಂಪರ್ಕ ಚೆನ್ನಾಗಿತ್ತು. ಮೇಲಾಗಿ ಸ್ವತಃ ವಿವಿಧ ಸಂಸ್ಥೆಗಳನ್ನು ಹುಟ್ಟುಹಾಕಿ ಬೆಳೆಸಿದ ಅನುಭವ ಬೇರೆ ಇತ್ತು. 1937ರಲ್ಲಿ ಮಕ್ಕಳಕೂಟದ ಆಶ್ರಯದಲ್ಲಿ ಮಹಿಳೆಯರಿಗೆ ಹಿಂದೀ ತರಗತಿಗಳು ಪ್ರಾರಂಭವಾದವು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಅದರಿಂದ ಪ್ರೇರಿತಳಾಗಿ ಮಹಿಳೆ ಯರ ಹೆಚ್ಚಿನ ಶಿಕ್ಷಣಕ್ಕೆ ಕೈಪಚ್ಚಿದಳು.

ಮಹಿಳಾ ವಿದ್ಯಾಲಯ : ಮಹಿಳಾ ಶಿಕ್ಷಣ ಇಂದಿಗೂ ಅಷ್ಟಾಗಿ ಮುಂದುವರಿದಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಸಾಮಾಜಿಕ ಕಟ್ಟುಪಾಡುಗಳು ಮಹಿಳಾ ಶಿಕ್ಷಣದ ಪ್ರಗತಿಗೆ ಅಡ್ಡಿಯನ್ನೊಡ್ಡಿವೆ. ತಂದೆತಾಯಂದಿರರಲ್ಲಿ ಅನೇಕರಿಗೆ ಗಂಡು ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿರುವಷ್ಟು ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿಲ್ಲ. ಬಾಲ್ಯದಲ್ಲಿ ಶಿಕ್ಷಣ ಪಡೆಯದ ಹೆಣ್ಣುಮಕ್ಕಳು ವಯಸ್ಸಾದನಂತರ ಜೀವನದಲ್ಲಿ

ಒಂದಲ್ಲಾ ಒಂದು ರೀತಿಯಲ್ಲಿ ತೊಂದರೆಗೆ ಸಿಲುಕುವ ಸಂದರ್ಭ ಗಳಿವೆ. ಅದರಲ್ಲೂ ವಿಧವೆಯಾದ ಹೆಂಗಸರು ಆರ್ಥಿಕ ಕಾರಣ ಗಳಿಗಾಗಿ ತೊಂದರೆಪಡುತ್ತಿರುವ ದೃಶ್ಯ ಸರ್ವೆ ಸಾಮಾನ್ಯ. ಆದ್ದರಿಂದ ಅಂತಹ ಹತಭಾಗ್ಯ ಹೆಣ್ಣು ಮಕ್ಕಳಿಗೆ ಶಿಕ್ಷಣ ಸೌಲಭ್ಯ ವನ್ನು ಒದಗಿಸುವುದು ಉಚಿತ ಮತ್ತು ನ್ಯಾಯ. ಈ ಹಿನ್ನೆಲೆ ಯಲ್ಲಿ ದುರ್ಗಾಬಾಯಿ 1940ನೆಯ ಸಾಲಿಗೂ ಮುನ್ನ ಮಹಿಳೆ ಯರಿಗೆ ಮದರಾಸಿದಲ್ಲಿ 'ಮಹಿಳಾ ವಿದ್ಯಾಲಯ'ವನ್ನು ತೆರೆದಳು. ಮಹಿಳೆಯರು ಕಾಶಿ ವಿಶ್ವವಿದ್ಯಾನಿಲಯದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕೂರಲು ಅವಕಾಶ ದೊರೆಯಿತು. 1942ರ ಪರೀಕ್ಷೆಗೆ ಮಹಿಳಾ ವಿದ್ಯಾಲಯದಿಂದ ಕುಳಿತವರು ಕೇವಲ ನಾಲ್ಕುಮಂದಿ. ಕ್ರಮೇಣ ಈ ಯೋಜನೆ ಮಹಿಳೆಯರನ್ನು ಆಕರ್ಷಿಸಿತು. ವರ್ಷೇವರ್ಷೇ ಮಹಿಳೆಯರು ಹೆಚ್ಚಿನ ಸಂಖ್ಯೆ ಯಲ್ಲಿ ಈ ಸದವಕಾಶವನ್ನು ಉಪಯೋಗಿಸಿಕೊಂಡರು. ಕ್ರಮೇಣ ಮದರಾಸು ಮತ್ತು ಆಂಧ್ರ ವಿಶ್ವವಿದ್ಯಾನಿಲಯಗಳು ಮಹಿಳೆಯರು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂರಲು ಅವಕಾಶ ನೀಡಿದವು. ಇದುವರೆವಿಗೆ 1,200 ಮಂದಿ ಮಹಿಳೆಯರಿಗೆ ಕಡಿಮೆಯಿಲ್ಲದಂತೆ ಈ ಯೋಜನೆಯ ಉಪಯೋಗ ಪಡೆದಿರು ವರು. ಹಾಗೆ ಎಸ್.ಎಸ್.ಎಲ್.ಸಿ. ಪಾಸುಮಾಡಿದವರಲ್ಲಿ ಅನೇಕ ಮಹಿಳೆಯರು ವೈದ್ಯ ಮತ್ತು ಕಾನೂನು ಪರೀಕ್ಷೆಗಳಿಗೆ ಕೂತು ಪದವೀಧರೆಯಾಗಿರುವರು.

ಮಹಿಳಾ ವಿದ್ಯಾಲಯದ ಕಾರ್ಯಕ್ರಮ ವರ್ಷೇವರ್ಷೇ ಜನಪ್ರಿಯತೆಯನ್ನು ಗಳಿಸಿತು. ಹೊರ ಪ್ರಾಂತ್ಯದ ಮಹಿಳೆ ಯರೂ ಸಹ ಈ ವಿದ್ಯಾಸಂಸ್ಥೆಯ ಪ್ರವೇಶ ಪಡೆಯಲು

ಇಚ್ಛಿಸಿದರು. ಅಂತಹ ವಿದ್ಯಾರ್ಥಿನಿಯರಿಗೆ ವಸತಿಸೌಕರ್ಯ ಸಿದ್ಧವಾಯಿತು.

ಮಹಿಳಾವಿದ್ಯಾಲಯದಲ್ಲಿ ನೈತಿಕ ಶಿಕ್ಷಣವೂ ಸಹ ಒಂದು ಭಾಗ. ಅವರ ನಡೆನುಡಿ ತಿದ್ದಿ ಅವರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವ ಪ್ರಯತ್ನ ನಡೆಯುತ್ತಿದೆ. ವಿದ್ಯಾಲಯವನ್ನು ಬಿಡುವ ವೇಳೆಗೆ ಅವರು ಜೀವನದ ಜವಾಬ್ದಾರಿ ಮತ್ತು ಗುರಿಯನ್ನರಿತು ಯಶಸ್ವಿಯಾಗಿ ಜೀವನ ನಡೆಸಲು ಸಮರ್ಥರಾಗುವರು.

1950ರಿಂದ 1960ರ ಅವಧಿಯಲ್ಲಿ ದುರ್ಗಾಬಾಯಿಯ ಸತತ ಪ್ರಯತ್ನದ ಫಲವಾಗಿ ಆಂಧ್ರ ಮಹಿಳಾಸಭೆಯ ಕಾರ್ಯ ಚಟುವಟಿಕೆಗಳು ವಿಸ್ತಾರವಾದವು. ಹೈದರಾಬಾದು, ಮಹಬೂಬು ನಗರ ಮತ್ತು ಸಂಗರೆಡ್ಡಿಗಳಲ್ಲಿ ಮಹಿಳಾ ಶಾಖೆಗಳು ಸ್ಥಾಪನೆಯಾದವು. ಮಹಿಳಾ ಕಲ್ಯಾಣಕ್ಕೆ ರೂಪಿಸಿದ್ದ ಅನೇಕ ಯೋಜನೆಗಳು ಆಂಧ್ರ ಮಹಿಳಾಸಭೆಯ ಮೂಲಕ ಕಾರ್ಯಗತವಾದವು. ಅದೆಲ್ಲಕ್ಕೂ ದುರ್ಗಾಬಾಯಿಯ ಪ್ರಭಾವಯುತವಾದ ವ್ಯಕ್ತಿತ್ವವೇ ಕಾರಣ. ವಿವಿಧ ಕಾರ್ಯಕ್ರಮಗಳ ಪರಿಚಯ ದುರ್ಗಾಬಾಯಿಯ ಜೀವನದ ಪ್ರಮುಖ ಸಾಧನೆಗಳನ್ನು ತಿಳಿಯಲು ಸಾಧ್ಯವಾಗುವುದು.

ನಾಗೇಶ್ವರ ಶಿಶುವಿಹಾರ : ದುರ್ಗಾಬಾಯಿ ಮೊದಲು ಸಂಸ್ಥೆಯನ್ನು ಪ್ರಾರಂಭಮಾಡಿದ್ದು ಮಕ್ಕಳ ಕಲ್ಯಾಣಕ್ಕೆ. ಮೂಲ ಉದ್ದೇಶಕ್ಕೆ ಚ್ಯುತಿ ಬಾರದಂತೆ 1957ರಲ್ಲಿ ಮಕ್ಕಳಿಗೆ ನರ್ಸರಿಶಾಲೆ ಆರಂಭವಾಯಿತು. ಆ ಶಾಲೆ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿದೆ. ಅಲ್ಲಿ ಪ್ರಾಥಮಿಕ ವಿಳಸೆಯ

ತರಗತಿಯವರೆಗೆ ಶಿಕ್ಷಣ ನೀಡಲಾಗುವುದು. ಬಡವರ ಮಕ್ಕಳಿಗೆ ಉಚಿತ ಶಿಕ್ಷಣವುಂಟು. ಈ ತೆರನಾದ ವಿನಾಯಿತಿ ಸೇಕಡ ಐವತ್ತು ಮಕ್ಕಳಿಗೆ ದೊರಕುವುದು. ಆ ಮಕ್ಕಳಿಗೆ ಸಮವಸ್ತ್ರ ಮತ್ತು ಮಧ್ಯಾಹ್ನದ ವೇಳೆಯ ಉಪಹಾರ ಒದಗಿಸುವ ವ್ಯವಸ್ಥೆ ಯಿದೆ. ಸಮಾಜಕಲ್ಯಾಣ ಮಂಡಳಿ ಈ ಸಂಸ್ಥೆಗೆ ಪ್ರತಿವರ್ಷ 2,000 ರೂಪಾಯಿ ಅನುದಾನ ನೀಡುವುದು.

ದಾದಿಯರ ತರಬೇತಿ : ಅಜ್ಞಾನ, ಅನಕ್ಷರತೆ ಮತ್ತು ಅನಾರೋಗ್ಯ ಇವು ಮೂರು ಭಾರತದ ಜನಜೀವನವನ್ನು ತ್ರಿನೇತ್ರನ ತ್ರಿಶೂಲದಂತೆ ಇರಿಯುತ್ತಿವೆ. ಅನಾರೋಗ್ಯ ಮತ್ತು ಖಾಯಿಲೆಯಿಂದ ನರಳುವವರಿಗೆ ದಯೆ ಮತ್ತು ಅನು ಕಂಪದಿಂದ ಕೂಡಿದ ಶುಶ್ರೂಷೆ ಅಗತ್ಯ. ಈ ತೆರನಾದ ರೀತಿ ಯಲ್ಲಿ ಸೇವೆ ಸಲ್ಲಿಸುವ ದಾದಿಯರ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ಕೊರತೆಯನ್ನರಿತು ದುರ್ಗಾಬಾಯಿ 1952 ರಲ್ಲಿ ದಾದಿಯರ ತರಬೇತಿ ಕೇಂದ್ರವನ್ನು ಪ್ರಾರಂಭಿಸಿದಳು. 1957ರಲ್ಲಿ ದಾದಿಯರ ತರಬೇತಿನ ಜೊತೆಗೆ ಮಿತಕುಟುಂಬ ಯೋಜನೆಯ ಶಿಕ್ಷಣವನ್ನು ವ್ಯವಸ್ಥೆಗೊಳಿಸಲಾಯಿತು. ಶಿಕ್ಷಣಾರ್ಥಿಗಳಿಗೆ ವಸತಿ ಸೌಕರ್ಯದ ಏರ್ಪಾಡಿದೆ. ತರಬೇತಿ ಕೇಂದ್ರದ ವೆಚ್ಚವನ್ನು ಆಂಧ್ರ ಸರಕಾರ ವಹಿಸುವುದು.

ನರ್ಸಿಂಗ್ ಹೋಂ : ಸರಕಾರಿ ಆಸ್ಪತ್ರೆಗಳಲ್ಲಿ ರೋಗಿ ಗಳಿಗೆ ತೃಪ್ತಿಕರವಾದ ಸೇವೆ ಒದಗುತ್ತಿಲ್ಲವೆಂಬ ದೂರು ಪತ್ರಿಕೆ ಗಳಲ್ಲಿ ಪದೇ ಪದೇ ಪ್ರಕಟವಾಗುತ್ತಿದೆ. ವೈದ್ಯರಿದ್ದರೆ ಔಷಧಿ ಯಿಲ್ಲ. ಔಷಧಿಯಿದ್ದರೆ ವೈದ್ಯರಿಲ್ಲ. ಇವೆರಡು ಸೌಕರ್ಯಗಳಿದ್ದಲ್ಲಿ ವೈದ್ಯರಿಗೆ ಇರಬೇಕಾದ ಮಾನವೀಯತೆಯ ಲಕ್ಷಣಗಳ ಕೊರತೆ

ಯಿದೆ ಎಂಬುದು ಸರ್ವೆ ಸಾಮಾನ್ಯ. ಇಂತಹ ವಾತಾವರಣದಲ್ಲಿ ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ಹೋಗುವುದು ಸ್ವಾಭಾವಿಕ. ದುರ್ಗಾಬಾಯಿ ದೇಶಮುಖ್ ಸುಸಜ್ಜಿತವಾದ ಮಹಿಳಾ ನರ್ಸಿಂಗ್ ಹೋಂ ಅನ್ನು ಮದರಾಸಿನ ದಕ್ಷಿಣ ಭಾಗದಲ್ಲಿರುವ ಅಡಿಯಾರಿನಲ್ಲಿ ಸ್ಥಾಪಿಸಿರುವಳು. ಅಲ್ಲಿ ದಕ್ಷರಾದ ವೈದ್ಯರಿದ್ದಾರೆ. ಒಳ್ಳೆಯ ಆಪರೇಷನ್ ಥಿಯೇಟರ್ ಇದೆ. ನರ್ಸಿಂಗ್ ಹೋಂನಲ್ಲಿ ಕುಟುಂಬ ಯೋಜನೆಯ ಸಲಹಾ ವಿಭಾಗವನ್ನು ಅಳವಡಿಸಲಾಗಿದೆ.

ಮೇಲ್ಕಂಡ ನರ್ಸಿಂಗ್ ಹೋಂ ಜೊತೆಗೆ ಆಸ್ಪತ್ರೆಯೂ ಸಹ ಇದೆ. ತಮಿಳು ನಾಡು ಸರಕಾರ ಮತ್ತು ಕ್ಷಯ ರೋಗ ಸಂಸ್ಥೆ ಈ ವಿಭಾಗದ ವೆಚ್ಚವನ್ನು ಒದಗಿಸುವುವು. ಕಿವಿ, ಮೂಗು, ಕಣ್ಣು ಮತ್ತು ಗಂಟಲು ಚಿಕಿತ್ಸಾ ವಿಭಾಗಗಳಿವೆ. ಜೊತೆಗೆ ಕ್ಷಯರೋಗದ ಚಿಕಿತ್ಸಾ ವಿಭಾಗವೂ ಸಹ ಇದೆ. ಆಸ್ಪತ್ರೆಯ ವೈದ್ಯರುಗಳು ಆ ಕ್ಷೇತ್ರದಲ್ಲಿ ವಾಸಿಸುವ ರೋಗಿಗಳ ಮನೆಗೆ ಭೇಟಿಕೊಟ್ಟು ಅವರ ಆರೋಗ್ಯವನ್ನು ಪರಿಶೀಲಿಸುತ್ತಿರುವುದು ಮೆಚ್ಚುವ ಸಂಗತಿ.

ಅಂಗವಿಕಲರ ಚಿಕಿತ್ಸಾ ಕೇಂದ್ರ : ಈಶ್ವರಿ ಪ್ರಸಾದ್ ದತ್ತಾತ್ರೇಯರ ಹೆಸರಿನಲ್ಲಿ 1960 ರಲ್ಲಿ ಅಂಗವಿಕಲರ ಚಿಕಿತ್ಸಾ ಕೇಂದ್ರ ಸ್ಥಾಪನೆ ಆಯಿತು. ದಿವಂಗತ ಹನುಮಂತರಾಯರೆಂಬುವರು ಮಗನ ಹೆಸರಿನಲ್ಲಿ ಮೇಲ್ಕಂಡ ಚಿಕಿತ್ಸಾಲಯಕ್ಕೆ ಅಪಾರ ಧನ ಸಹಾಯ ಮಾಡಿದ್ದಾರೆ. ಈ ಚಿಕಿತ್ಸಾಲಯದಲ್ಲಿ 75 ರೋಗಿಗಳಿಗೆ ಚಿಕಿತ್ಸೆ ಮಾಡಲು ಸೌಕರ್ಯವಿದೆ. ರೋಗಿಗಳಿಗೆ ಊಟ, ತಿಂಡಿ ಮತ್ತು ವಸತಿ ಸೌಕರ್ಯವಿದೆ. ಅಂಗವಿಕಲರಿಗೆ

ಬೇಕಾಗುವ ಸಾಧನಗಳನ್ನು ತಯಾರಿಸುವ ಕೇಂದ್ರವೂ ಸಹ ಇದೆ.

ಹೈದರಾಬಾದಿನಲ್ಲಿ ಆಂಧ್ರ ಮಹಿಳಾ ಸಭೆಯ ವಿಸ್ತರಣೆ : 1965ರಲ್ಲಿ ವಿಶಾಲಾಂಧ್ರ ಸ್ಥಾಪನೆ ಆಯಿತಷ್ಟೆ. ಆಗ ಮದರಾಸಿನಲ್ಲಿದ್ದಂತೆ ಹೈದರಾಬಾದಿನಲ್ಲೂ ಸಹ ಆಂಧ್ರ ಮಹಿಳಾ ಸಭೆ ಅನೇಕ ಯೋಜನೆಗಳನ್ನು ಕೈಕೊಂಡಿತು. ಮದರಾಸಿನಲ್ಲಿದ್ದಂತೆ ಹೈದರಾಬಾದಿನಲ್ಲೂ ಸಹ ದಾದಿಯರ ತರಬೇತಿ, ಮಹಿಳೆಯರ ಸಂಜೆಯ ತರಗತಿ, ನರ್ಸಿಂಗ್ ಹೋಂ, ಪ್ರೌಢಶಾಲಾ ಉಪಾಧ್ಯಾಯಿನಿಯರ ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ನಡೆಸುವ ಕೇಂದ್ರಗಳಿವೆ.

ಕುಶಲ ಕೈಗಾರಿಕೆಗಳ ತರಬೇತಿ ಕೇಂದ್ರ : ಕೇವಲ ಲೋಕ ವ್ಯವಹಾರ ಶಿಕ್ಷಣ ಮಹಿಳೆಯರ ಪ್ರಗತಿಯನ್ನು ಸಾಧಿಸಲಾರದು. ಅವರಿಗೆ ಯಾವುದಾದರೂ ಕುಶಲಕಲೆಗಳನ್ನು ಕಲಿಸಬೇಕು. ಅದರಿಂದ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ಕುಟುಂಬ ನಿರ್ವಹಣೆಗೆ ಅನುಕೂಲವಾಗುವುದು. ಅದರಲ್ಲೂ ಹತಭಾಗ್ಯರಾದ ಮಹಿಳೆಯರು, ವಿಧವೆಯರು ಮತ್ತು ಬಡಕುಟುಂಬದವರು ಯಾವುದಾದರೂ ಒಂದು ಕಸುಬನ್ನು ಜೀವನ ನಿರ್ವಹಣೆಗಾಗಿ ಕಲಿಯಬೇಕಾದದ್ದು ಅನಿವಾರ್ಯ. ಅದರಿಂದ ಹೊಲಿಗೆ ಮತ್ತು ಕಸೂತಿ ತರಗತಿಗಳಿವೆ. ಮುದ್ರಣಾಲಯವಿದೆ. ಅಲ್ಲಿ ಅಚ್ಚಿನ ಮೊಳೆ ಜೋಡಿಸುವುದು, ಪುಸ್ತಕಗಳಿಗೆ ರಟ್ಟು ಕಟ್ಟುವುದು, ಅಚ್ಚು ಮಾಡುವುದು ಮುಂತಾದ ಕಸಬುಗಳನ್ನು ಹೇಳಿ ಕೊಡಲಾಗುತ್ತಿದೆ.

ಅಖಿಲ ಭಾರತ ಕುಶಲ ಕೈಗಾರಿಕೆಗಳ ಮಂಡಳಿಯ ಸಹಾಯದಿಂದ ಮಹಿಳೆಯರಿಗೆ ಗೊಂಬೆ ತಯಾರಿಕೆ, ಬಟ್ಟೆಗೆ ಬಣ್ಣ ಹಾಕುವುದು, ಚರ್ಮದಲ್ಲಿ ಕುಶಲ ಕಲೆ ಕೆಲಸಮಾಡುವುದು, ಪುಸ್ತಕಗಳಿಗೆ ರಟ್ಟು ಕಟ್ಟುವುದು, ಮೇದರ ಕಸುಬು ಮುಂತಾದ ಗೃಹ ಕೈಗಾರಿಕೆಗಳನ್ನು ಕಲಿಸಲಾಗುತ್ತಿದೆ. ಆ ಮಂಡಳಿಯು ಅಧ್ಯಾಪಕರ ಸಂಬಳ, ಶಿಕ್ಷಣಾರ್ಥಿಗಳ ವೇತನ, ಮತ್ತು ಕಚ್ಚಾ ಮಾಲುಗಳ ವೆಚ್ಚವನ್ನು ಕೊಡುವುದು.

ಇದುವರೆವಿಗೆ ವಿವಿಧ ಕುಶಲಕಲೆಗಳಲ್ಲಿ ಒಟ್ಟು 443 ಮಂದಿ ಮಹಿಳೆಯರು ತರಬೇತು ಪಡೆದಿರುವರು. ಅವರ ಪೈಕಿ ಅನೇಕ ಮಹಿಳೆಯರು ಅಧ್ಯಾಪಕಿಯರಾಗಿ ಕೆಲಸ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ತರಬೇತಿಯ ಜೊತೆಗೆ ಉತ್ಪಾದನೆಯನ್ನು ಹೆಚ್ಚು ಮಾಡುವ ಕಡೆಗೆ ಗಮನಕೊಡುವ ಆಲೋಚನೆಯಿದೆ. ಗೃಹಿಣಿಯರಲ್ಲಿ ಕೆಲವು ಶ್ರೀಮಂತ ಮತ್ತು ಮಧ್ಯಮ ವರ್ಗದ ಮಹಿಳೆಯರು ಕೇವಲ ಹವ್ಯಾಸ ದೃಷ್ಟಿಯಿಂದ ಕೆಲವು ಕುಶಲ ಕೈಗಾರಿಕೆಗಳನ್ನು ಕಲಿಯಲು ಇಚ್ಛಿಸುವರು. ಅಂತಹವರು ಅಲ್ಪಪ್ರಮಾಣದ ಶುಲ್ಕ ಕೊಟ್ಟು ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಗಾಂಧಿ ಶತಾಬ್ದಿ ಭವನ : ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸೂತ್ರಧಾರಿ ಮತ್ತು ರಾಷ್ಟ್ರಪಿತ ಗಾಂಧೀಜಿಯ ಆದರ್ಶಗಳು ಇಂದು ಮರೆಯಾಗುತ್ತಿವೆ. ಸ್ವಾತಂತ್ರ್ಯದ ನಂತರ ಜನ್ಮತಾಳಿದವರಿಗಂತೂ ಗಾಂಧೀಜಿಯ ಪರಿಚಯವೇ ಇಲ್ಲ. ಹಾಗೂ ಅವರ ಆದರ್ಶಗಳ ಅರಿವಿಲ್ಲ. ಗಾಂಧೀಜಿ ಅವರಿಗೆ ಒಬ್ಬ ಪೌರಾಣಿಕ ವ್ಯಕ್ತಿಯಂತೆ ಕಂಡರೆ ಆಶ್ಚರ್ಯವೇನಿಲ್ಲ.

ಗಾಂಧೀಜಿಯ ಸತ್ಯ, ಅಹಿಂಸೆ ಮುಂತಾದ ಆದರ್ಶಗಳು ರಾಷ್ಟ್ರದ ಜನತೆಯ ಹಾಗೂ ವಿಶ್ವದ ಸುಖ ಶಾಂತಿಗೆ ಮೂಲ. ಆದ್ದರಿಂದ ಆ ಮಹಾತ್ಮನ ತತ್ವ ಮತ್ತು ಆದರ್ಶಗಳನ್ನು ಅಧ್ಯಯನ ಮಾಡಲು ಗಾಂಧಿ ಶತಾಬ್ದಿ ಭವನಗಳನ್ನು ತೆರೆಯಲು ಆಂಧ್ರ ಸರಕಾರ ಎರಡು ಲಕ್ಷ ರೂಪಾಯಿಗಳನ್ನು ನೀಡಿತು. ದುರ್ಗಾ ಬಾಯಿ ದೇಶಮುಖ್ ತನ್ನ ಪ್ರಭಾವಪೂರ್ಣವಾದ ಪ್ರಯತ್ನ ದಿಂದ ಹದಿಮೂರು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದಳು. ಒಟ್ಟು ಹಣದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಹದಿಮೂರು ಗಾಂಧಿ ಶತಾಬ್ದಿ ಭವನಗಳು ನಿರ್ಮಾಣವಾದವು. ಹೈದರಾ ಬಾದಿನ ಕಾಲೇಜಿನ ಆವರಣದಲ್ಲೂ ಸಹ ಅಂತಹ ಕಟ್ಟಡವಿದೆ. ಅಲ್ಲಿ ಪ್ರತಿ ಶುಕ್ರವಾರ ಭಜನೆ, ಸಾರ್ವಜನಿಕಸಭೆ, ಗಾಂಧೀಜಿಯ ಜೀವನ ಮತ್ತು ಆದರ್ಶಗಳ ಬಗ್ಗೆ ವಿದ್ವಾಂಸರಿಂದ ಉಪನ್ಯಾಸ ಗಳು ನಡೆಯುವುವು.

ಪೌಷ್ಟಿಕ ಆಹಾರ ತಯಾರಿಕಾ ತರಬೇತಿ ಕೇಂದ್ರ : ರೈತಾಪಿ ಮಹಿಳೆಯರಿಗೆ ಕೇವಲ ಆಧುನಿಕ ಬೇಸಾಯ ವಿಧಾನ ತಿಳಿಸಿದರೆ ಸಾಲದು. ಅವರಿಗೆ ತಮ್ಮ ಪರಿಸರದಲ್ಲಿ ದೊರಕುವ ಪದಾರ್ಥ ಗಳಿಂದ ಪೌಷ್ಟಿಕ ಆಹಾರ ತಯಾರಿಸುವುದನ್ನು ಕಲಿಸುವುದು ಅಗತ್ಯ. ಈ ವಿಭಾಗದಲ್ಲಿ ನಾಲ್ಕು ಮಂದಿ ಮಹಿಳೆಯರಿರು ವರು. ಅವರು ವ್ಯವಸಾಯ ಮತ್ತು ಗೃಹವಿಜ್ಞಾನದಲ್ಲಿ ಪದವೀಧರೆಯರು. ಅವರು ಪೌಷ್ಟಿಕ ಆಹಾರ ತಯಾರಿಕೆಯಲ್ಲಿ ಆರು ತಿಂಗಳು ಕಾಲ ತರಬೇತುಪಡೆದವರು. ಅವರು ಗ್ರಾಮೀಣ ಮಹಿಳೆಯರಿಗೆ ಶುಚಿ, ರುಚಿಗಳಿಂದ ಕೂಡಿದ ಪೌಷ್ಟಿಕ ಆಹಾರ ತಯಾರಿಸುವುದನ್ನು ಹೇಳಿಕೊಡುವರು. ಈ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ಉಪಯೋಗಕರವಾಗಿ ಕಂಡು ಬಂದಿದೆ. ಈ ಯೋಜನೆಗೆ ಫ್ರೀಡಂ ಫ್ರಂ ಹಂಗರ್ ಕ್ಯಾಂಪೇನ್ (Freedom from Hunger campaign) ಸಂಸ್ಥೆಯಿಂದ ನೆರವು ದೊರೆಯುತ್ತಿದೆ.

ರೈತರ ಕ್ರಿಯಾತ್ಮಕ ಶಿಕ್ಷಣ: ವಿಶ್ವ ಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ಭಾರತ ಸರಕಾರ ರೈತರ ಕ್ರಿಯಾತ್ಮಕ ಶಿಕ್ಷಣವನ್ನು ಕೈಗೊಂಡಿದೆ. ಈ ಯೋಜನೆಯಲ್ಲಿ ಯುನೆಸ್ಕೊ ಆಸಕ್ತಿ ಹೊಂದಿವೆ. ದಕ್ಷತೆಯಿಂದ ಸೇವೆ ಸಲ್ಲಿಸಬಲ್ಲ ಖಾಸಗಿ ಸಂಸ್ಥೆಗಳಿಗೆ ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಆಯಾ ರಾಜ್ಯ ಸರಕಾರಗಳ ಶಿಫಾರಸಿನ ಮೇರೆ ಭಾರತ ಸರಕಾರ ವಹಿಸಿಕೊಡುವುದು. 1967-68ರಿಂದ ಆಂಧ್ರ ಮಹಿಳಾ ಸಭೆ ಈ ಯೋಜನೆಯನ್ನು ಕೈಕೊಂಡಿರುವುದೇ ಅದಕ್ಕೆ ಸಾಕ್ಷಿ. ಕೇರಳ ಗ್ರಂಥ ಶಾಲಾ ಸಂಘ, ಉದಯಪುರ ಸೇವಾ ಮಂದಿರ ಮುಂತಾದ ಸಂಸ್ಥೆಗಳಿಗೂ ಸಹ ಈ ಯೋಜನೆಯನ್ನು ವಹಿಸಲಾಗಿದೆ. ಕರ್ನಾಟಕದಲ್ಲಿ ಮಾತ್ರ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಈ ದಿಸೆಯಲ್ಲಿ ಅಪಾರ ಅನುಭವ ಹೊಂದಿದ್ದರೂ ಸಹ ರಾಜ್ಯ ಸರಕಾರ ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಅದಕ್ಕೆ ವಹಿಸಿಲ್ಲ. ಈ ಹಿನ್ನೆಲೆಯಲ್ಲಿ ಆಂಧ್ರ ಮಹಿಳಾ ಸಭೆಯ ಕಾರ್ಯದಕ್ಷತೆ ರಾಜ್ಯ ಸರಕಾರದ ಗಮನವನ್ನು ಸೆಳೆದಿದೆ ಎಂದು ಹೇಳಬಹುದು.

ಯೋಜನೆಯ ಪ್ರಾರಂಭದಲ್ಲಿ ಜನಗಣತಿ ಮುಂತಾದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವಿವರಗಳಸಂಗ್ರಹವನ್ನು, ಪಾಠೋಪಕರಣಗಳ ತಯಾರಿಕೆ, ಉಪಾಧ್ಯಾಯರ ಮತ್ತು

ಮೇಲ್ವಿಚಾರಕರ ತರಬೇತಿ ಕಾರ್ಯಕ್ರಮಗಳನ್ನು ಆಂಧ್ರ ಮಹಿಳಾ ಸಭೆ ಕೈಕೊಂಡಿತು. ಆಂಧ್ರ ಸರಕಾರ ಈ ದಿಸೆಯಲ್ಲಿ ನಡೆಸಿರುವ ಕಾರ್ಯವನ್ನು ಮೆಚ್ಚಿ ರಾಜ್ಯದ ಎಂಟು ಜಿಲ್ಲೆಗಳಲ್ಲಿ ರೈತರ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಕಾರ್ಯಗತ ಮಾಡಲು ಆಂಧ್ರ ಮಹಿಳಾ ಸಭೆಗೆ ವಹಿಸಿರುವುದು ಸ್ತುತ್ಯಾರ್ಹವಾದ ಸಂಗತಿ. ಈ ಎಂಟು ಜಿಲ್ಲೆಗಳ ಪೈಕಿ ಐದು ಜಿಲ್ಲೆಗಳಲ್ಲಿ ಮಿತ ಕುಟುಂಬ ಯೋಜನೆಯನ್ನು ಕೈಕೊಳ್ಳಲಾಗಿದೆ. ಈ ಯೋಜನೆಯ ರೀತ್ಯಾ ಕುಟುಂಬ ಯೋಜನೆಯ ಕಾರ್ಯಕರ್ತರು ಪ್ರತಿಯೊಂದು ಮನೆಗೂ ಭೇಟಿಕೊಟ್ಟು ಕುಟುಂಬ ಯೋಜನೆ ಬಗ್ಗೆ ಪ್ರಚಾರ ನಡೆಸುವರು.

ನವಸಾಕ್ಷರರು ತಾವು ಕಲಿತ ಓದುಬರಹವನ್ನು ರೂಢಿಸಿಕೊಳ್ಳಲು ಸೂಕ್ತ ಸಾಹಿತ್ಯ ಬೇಕು. ಈ ಸಾಹಿತ್ಯಕ್ಕೆ ಸ್ಥಿರೀಕರಣ ಸಾಹಿತ್ಯವೆಂದು ಹೆಸರು. ಆಂಧ್ರ ಮಹಿಳಾ ಸಭೆ ಲಕ್ನೊ ಸಾಕ್ಷರತಾನಿಕೇತನದ ನೆರವಿನಿಂದ ಬರಹಗಾರರ ಶಿಬಿರವೊಂದನ್ನು ನಡೆಸಿತು. ಅದರಲ್ಲಿ ನವಸಾಕ್ಷರರಿಗೆ ಬೇಕಾದ ಸಾಹಿತ್ಯ ರಚನೆ ಆಯಿತು. ಅದನ್ನು ಪ್ರಕಟಿಸಲು ಭಾರತ ಸರಕಾರ ಧನಸಹಾಯ ನೀಡಿತು.

ಜನಸಂಖ್ಯಾ ಸ್ಫೋಟನೆ, ಗರ್ಭಿಣಿ ಮತ್ತು ಶಿಶು ಸಂರಕ್ಷಣೆ, ಸಾರ್ವಜನಿಕ ಆರೋಗ್ಯ ಮುಂತಾದ ವಿಷಯಗಳ ಮೇಲೆ ಮಡಿಕೆ ಹಾಳೆಗಳನ್ನು ತಯಾರು ಮಾಡಲಾಗಿದೆ.

ಲಕ್ನೊ ಸಾಕ್ಷರತಾನಿಕೇತನ ಹಿಂದಿಯಲ್ಲಿ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಅವುಗಳನ್ನು ಭಾರತೀಯ ಇತರ ಭಾಷೆಗಳಿಗೆ ತರ್ಜುಮೆ ಮಾಡಿ ಪ್ರಕಟಿಸುವ ಕಾರ್ಯಕ್ಕೆ ಧನಸಹಾಯ

ನೀಡುವ ಯೋಜನೆಯೊಂದನ್ನು ಸಾಕ್ಷರತಾನಿಕೇತನ ಹೊಂದಿತ್ತು. ಆ ಯೋಜನೆಯ ನೆರವಿನಿಂದ ಹಿಂದೀ ಪ್ರಕಟನೆಗಳನ್ನು ತೆಲುಗಿನಲ್ಲಿ ಭಾಷಾಂತರಿಸಿ ಪ್ರಕಟಿಸಲಾಯಿತು. ಇಂತಹ ಏರ್ಪಾಡಿನಿಂದ ಭಾಷಾಂಧತೆ ಕಡಮೆಯಾಗಿ ಜನತೆಯಲ್ಲಿ ಭಾವೈಕ್ಯತೆ ಮೂಡಲು ಸಹಾಯಕವಾಗುವುದು. ಜೊತೆಗೆ ಒಂದು ಭಾಷೆಯಲ್ಲಿ ಅಡಗಿರುವ ಜ್ಞಾನರಾಶಿಯನ್ನು ಇನ್ನೊಂದು ಭಾಷೆಯಲ್ಲಿ ಪ್ರಕಾಶಕ್ಕೆ ತರಲು ಅನುಕೂಲ.

1971ರಲ್ಲಿ ಹೈದರಾಬಾದಿನಲ್ಲಿ ಲಕ್ನೊ ಸಾಕ್ಷರತಾ ನಿಕೇತನದ ಮಾದರಿಯಲ್ಲಿ ಒಂದು ಸಂಸ್ಥೆ ಸ್ಥಾಪನೆ ಆಯಿತು. ವಯಸ್ಕರ ಪಠ್ಯಪುಸ್ತಕ ರಚನೆ, ಸ್ಥಿರೀಕರಣ ಸಾಹಿತ್ಯ ರಚನೆ ಮತ್ತು ಮೌಲ್ಯ ಮಾಪನೆ, ಉಪಾಧ್ಯಾಯರ ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ಈ ಸಂಸ್ಥೆ ಕೈಕೊಂಡಿದೆ. ಈ ಕಾರ್ಯಕ್ರಮಗಳಿಗೆ ಕೆನಡಾ ದೇಶದ ವಿಶ್ವ ಸಾಕ್ಷರತಾ ಸಂಸ್ಥೆಯು ನೆರವು ನೀಡಲು ಒಪ್ಪಿತು.

ಒಟ್ಟಿನಲ್ಲಿ ದುರ್ಗಾಬಾಯಿಯ ಪ್ರತಿಭೆ ಮತ್ತು ಶ್ರದ್ಧಾಪೂರ್ವಕವಾದ ಶ್ರಮದ ಫಲವಾಗಿ ಆಂಧ್ರ ಮಹಿಳಾಸಭೆ ಬಹುವ್ಯಾಪಕವಾದ ಕಾರ್ಯಕ್ರಮಗಳನ್ನು ಕೈಕೊಂಡಿದೆ. ಮದರಾಸಿನಲ್ಲಿರುವ ಆಂಧ್ರಮಹಿಳಾಸಭೆಯು 28 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿವೆ. ಅದರ ಸವಿನೆನಪಿಗಾಗಿ ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದ ಡಾ॥ ಎಸ್. ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ರಜತಮಹೋತ್ಸವ ನಡೆಯಿತು.

ಅಂತರಾಷ್ಟ್ರೀಯ ಮಟ್ಟದಲ್ಲಿ ಸೇವೆ : ದುರ್ಗಾಬಾಯಿ ದೇಶಮುಖ್‌ರವರ ಪ್ರತಿಭೆ ಯೂನೆಸ್ಕೊವರೆಗೆ ಹರಡಿದೆ.

ಯುನೆಸ್ಕೊ ಆಕೆಯ ಸೇವೆಯನ್ನು ಹಲವಾರು ವಿಧದಲ್ಲಿ ಪಡೆದಿದೆ. ಅವುಗಳ ಪೈಕಿ ಕೆಲವು ಪ್ರಮುಖವಾದವುಗಳನ್ನು ಮಾತ್ರ ಪ್ರಸ್ತಾಪಿಸಲಾಗುವುದು. 1965ರಲ್ಲಿ ದುರ್ಗಾಬಾಯಿ ದೇಶಮುಖ್‌ರವರನ್ನು ಇಡೀ ಏಷ್ಯಾಕ್ಕೆ ಒಂದು ಶಿಕ್ಷಣ ಯೋಜನೆಯನ್ನು ರೂಪಿಸಲು ಯುನೆಸ್ಕೊ ಆಹ್ವಾನಿಸಿತು. ಅದೇ ವರ್ಷ ಇರಾನಿನಲ್ಲಿ ನಡೆದ ಅಂತರರಾಷ್ಟ್ರೀಯ ಸಾಕ್ಷರತಾ ಸಮ್ಮೇಳನದಲ್ಲಿ ಆಕೆ ಭಾಗವಹಿಸಬೇಕಿತ್ತು. ಆದರೆ ಭಾರತ ಪಾಕಿಸ್ತಾನ ಯುದ್ಧದ ಪ್ರಯುಕ್ತ ಸಮ್ಮೇಳನಕ್ಕೆ ಆಕೆ ಹೋಗಲಾಗಲಿಲ್ಲ. 1965 ರಿಂದ 1968ರ ವರೆಗೆ ಆಕೆ ಯುನೆಸ್ಕೊ ಅಂತರರಾಷ್ಟ್ರೀಯ ನಿರಕ್ಷರತಾ ನಿರ್ಮೂಲನ ಸಲಹಾ ಸಮಿತಿಯ ಸದಸ್ಯಳಾಗಿ ಸೇವೆ ಸಲ್ಲಿಸಿರುವಳು.

ದುರ್ಗಾಬಾಯಿ ದೇಶಮುಖ್‌ರವರ ಸಾಧನೆಗಳು : ಎಲ್ಲ ಪ್ರಸಿದ್ಧ ವ್ಯಕ್ತಿಗಳ ಜೀವನದಲ್ಲಿಯೂ ತೋರಿಬರುವ ಪ್ರಮುಖ ಲಕ್ಷಣಗಳನ್ನು ದುರ್ಗಾಬಾಯಿ ದೇಶಮುಖ್‌ರವರ ಜೀವನದಲ್ಲಿ ನಾವು ಕಾಣುತ್ತೇವೆ. ಆಶಾದಾಯಕವಲ್ಲದ ಪರಿಸರ, ಪರಿಸರದ ಪ್ರಭಾವವನ್ನು ಮೆಟ್ಟಿ ಮೇಲಕ್ಕೇಳುವ ವ್ಯಕ್ತಿತ್ವ, ಇಂತಹ ವ್ಯಕ್ತಿತ್ವದ ಕಡೆಯಿಲ್ಲದ ಬೆಳವಣಿಗೆ, ಈ ಬೆಳವಣಿಗೆಯಲ್ಲಿ ಸಮಾಜೋದ್ಧಾರ ಮತ್ತು ಆತ್ಮೋದ್ಧಾರ ಕಾರ್ಯಗಳೆರಡೂ ಜೊತೆಜೊತೆಯಾಗಿ ಮುಂದುವರಿಯುತ್ತಿರುವುದು.

ಗಾಂಧೀಜಿಯವರು ಮಹಾ ವ್ಯಕ್ತಿಗಳನ್ನು ಎಲ್ಲೆಲ್ಲೂ ಸೃಷ್ಟಿಸುತ್ತಿದ್ದರೆಂದು ಅವರ ಮಹಾಕಾರ್ಯವನ್ನು ಕುರಿತು ಒಂದು ಹೇಳಿಕೆಯಿದೆ. ದುರ್ಗಾಬಾಯಿಯವರ ಜೀವನವೂ

ಗಾಂಧೀಜಿಯವರಿಂದಲೇ ಪ್ರಭಾವಿತವಾದುದು. ಗಾಂಧೀಜಿಯವರ ಗಮನವೆಲ್ಲವೂ ದೀನದಲಿತರನ್ನು ಉದ್ಧಾರಮಾಡುವುದರ ಮೇಲೆ ಕೇಂದ್ರೀಕೃತವಾಗಿತ್ತು. ಅವರು ಕೈಕೊಂಡ ದೀನದಲಿತರ ಉದ್ಧಾರದಲ್ಲಿ ಶಿಕ್ಷಣಕ್ಕೆ ಪ್ರಧಾನಸ್ಥಾನವಿತ್ತು. ದುರ್ಗಾಬಾಯಿ ದೇಶಮುಖ್‌ರವರ ಜೀವನವೆಲ್ಲಾ ಈ ಮೂಲ ಮಂತ್ರದ ವಿವರಣೆಯಂತಿದೆ.

ದುರ್ಗಾಬಾಯಿ ದೇಶಮುಖ್‌ರವರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದಾಗ ಆಕೆಗೆ 25 ವರ್ಷ ವಯಸ್ಸು. ಪ್ರಾಥಮಿಕ ಶಿಕ್ಷಣವೂ ಪೂರ್ಣವಾಗಿರಲಿಲ್ಲ. ಗಾಂಧೀಜಿಯವರ ಆಶ್ರಮದಲ್ಲಿದ್ದು ಜೀವನ ಶಿಕ್ಷಣವನ್ನು ಪ್ರಾರಂಭಿಸಿದಳು. ಸಾಂಪ್ರದಾಯಿಕ ಶಿಕ್ಷಣವನ್ನು, ಹೆಂಗಸರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿಲ್ಲದ ಆ ಕಾಲದಲ್ಲೆ, ಮುಂದುವರಿಸಿ ಎಂ.ಎ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದಳು. ಅಲ್ಲದೆ ಲಾ-ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಕೀಲಿ ವೃತ್ತಿಯನ್ನು ಕೈಕೊಂಡಳು.

ತನ್ನ ಜೀವನವನ್ನು ಹಸನು ಮಾಡುವುದರಲ್ಲಿ ವಿದ್ಯಾಭ್ಯಾಸ ಹೇಗೆ ಸಹಾಯ ಮಾಡಿತೆಂದು ಅರಿತ ಆಕೆ ತನ್ನಂತೆ ದುಃಸ್ಥಿತಿಯಲ್ಲಿದ್ದ ತನ್ನ ಸೋದರಿಯರಿಗೂ ವಿದ್ಯಾಭ್ಯಾಸಕ್ಕೆ ಅವಕಾಶಮಾಡಿಕೊಡಬೇಕೆಂದು ಪ್ರಾರಂಭಿಸಿದ ಪ್ರಯತ್ನಗಳ ಪರಂಪರೆಯೇ ಆಕೆಯ ಸಾಧನೆಯೆನ್ನಬಹುದು. ಮಕ್ಕಳ ಶಿಕ್ಷಣಕ್ಕೆ ಒಂದು ಶಾಲೆಯನ್ನು ಸ್ಥಾಪಿಸಿದ ಮೇಲೆ ತಾಯಿಯರಿಗೆ ಶಿಕ್ಷಣವಿಲ್ಲದಿದ್ದರೆ ಮಕ್ಕಳ ಶಿಕ್ಷಣ ಯಶಸ್ವಿಯಾಗದೆಂದು ತಿಳಿದು ವಯಸ್ಕರಾದ ಮಹಿಳೆಯರಿಗೆ ಶಿಕ್ಷಣಕ್ಕೆ ಶಾಲೆ ತೆಗೆದಳು. ಮಕ್ಕಳ

ಶಿಕ್ಷಣದಲ್ಲಿ ನೂಲುವುದು, ನೇಯುವುದು ಶಿಕ್ಷಣದ ಅಂಗವಾಗಿತ್ತು. ಅದು ಕೇವಲ ಪುಸ್ತಕ ಶಿಕ್ಷಣವಾಗಿರಲಿಲ್ಲ. ಶಿಸ್ತಿಗೆ ಪ್ರಧಾನ ಸ್ಥಾನವಿತ್ತು. ಶಾಲೆಯ ವಿದ್ಯಾರ್ಥಿನಿಯರು ದಕ್ಷರಾದ ಸ್ವಯಂ ಸೇವಕಿಯರೆಂದು ಹೆಸರು ಗಳಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಅವಳು ರಾಜ್ಯಾಂಗ ರಚನಾ ಸಭೆಯ ಸದಸ್ಯಳಾದ ಮೇಲೆ ಆಕೆಯ ಕಾರ್ಯಕ್ಷೇತ್ರ ದೆಹಲಿಗೂ ವಿಸ್ತರಿಸಿತು. ದೆಹಲಿಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿದಳು. ಅಲ್ಲಿಂದ ಮುಂದೆ ಇಡೀ ಭಾರತವೇ ಆಕೆಯ ಸೇವಾಕ್ಷೇತ್ರವಾಯಿತು. ದೇಶದಲ್ಲೆಲ್ಲಾ ಸಮಾಜ ಸೇವಾ ಕಲ್ಯಾಣ ಮಂಡಳಿಗಳು ಸ್ಥಾಪನೆಯಾದದ್ದು ಆಕೆಯ ಸತತ ಶ್ರಮದಿಂದ. ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರ ಸೇವಾಕಾರ್ಯವನ್ನು ನಿರ್ವಹಿಸುವವರಿಗೆ ವಿಶಿಷ್ಟವಾದ ತರಬೇತಿ ಅವಶ್ಯಕ. ಅದಕ್ಕಾಗಿ ಮಹಿಳಾ ಶಿಕ್ಷಣ ಕೇಂದ್ರಗಳು ಏರ್ಪಾಡಾದವು. ಜೊತೆಗೆ ಗ್ರಾಮಗಳಲ್ಲಿ ವಾಸಿಸುವ ಮಹಿಳೆಯರ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿಯನ್ನು ಉತ್ತಮಪಡಿಸುವುದು ಕಲ್ಯಾಣ ಮಂಡಳಿಗಳ ಗುರಿಯಾಗಿತ್ತು. ಗ್ರಾಮದಲ್ಲಿದ್ದ ಮಹಿಳಿಯರಿಗೆ ಈ ಬಗೆಯ ಶಿಕ್ಷಣವಾದರೆ ನಗರಗಳಲ್ಲಿದ್ದ ಸ್ತ್ರೀಯರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಮಹಿಳಾ ವಿದ್ಯಾಲಯ ಮತ್ತು ಕಾಲೇಜುಗಳನ್ನು ದುರ್ಗಾಬಾಯಿ ದೇಶಮುಖರವರು ಸ್ಥಾಪಿಸಿದರು. ಮಹಿಳೆಯರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಲು ಕುಶಲ ಕೈಗಾರಿಕಾ ಕೇಂದ್ರಗಳು ಜನ್ಮತಾಳಿದವು. ಶ್ರೀಮಂತ ಮತ್ತು ಮಧ್ಯಮ ವರ್ಗದ ಮಹಿಳೆಯರು ಹವ್ಯಾಸದ ದೃಷ್ಟಿಯಿಂದ ಅಲ್ಪಶುಲ್ಕ ಕೊಟ್ಟು ಕುಶಲ ಕಲೆಗಳನ್ನು ಕಲಿಯುವ ಅವಕಾಶ

ವನ್ನು ಕಲ್ಪಿಸಿಕೊಟ್ಟಳು. ಮಕ್ಕಳ ಶಿಕ್ಷಣ, ಮಹಿಳೆಯರ ಶಿಕ್ಷಣಕ್ಕೆ ಆಕೆಯು ಕೊಡುಗೆ ಅಪಾರ. ಇನ್ನೊಂದು ದೃಷ್ಟಿ ಯಿಂದ ಆಕೆಯು ಸೇವೆ ಆಂಧ್ರದಲ್ಲಿ ಪ್ರಾರಂಭವಾಗಿ ಭಾರತ ಮತ್ತು ಅಂತರರಾಷ್ಟ್ರೀಯ ಕ್ಷೇತ್ರಕ್ಕೂ ಸಹ ದೊರಕಿತು ಎಂದು ಹೇಳಬಹುದು. ಆಕೆಯು ಸೇವೆ ಸರ್ವತೋಮುಖವಾದು ದಾಗಿದ್ದರೂ ಅದರಲ್ಲಿ ಶಿಕ್ಷಣವು ಪ್ರಾಮುಖ್ಯವಾಗಿ ಕಾಣ ಬರುತ್ತಿತ್ತು. ಒಟ್ಟಿನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಶೈಕ್ಷಣಿಕ ಕ್ಷೇತ್ರಗಳಲ್ಲಿ ಬಹುಮುಖವಾದ ಸೇವೆ ಸಲ್ಲಿಸಿರುವ ವ್ಯಕ್ತಿ ದುರ್ಗಾಬಾಯಿ ದೇಶಮುಖ್. ಆಕೆ ಆಂಧ್ರದಲ್ಲಿ ಮಹಿಳೆಯರ ಪ್ರಗತಿಗೆ ಸ್ಥಾಪನೆ ಮಾಡಿರುವ ಸಂಸ್ಥೆಗಳು ಆಕೆಯ ಮಹತ್ಸಾಧನೆಯನ್ನು ಸಾರಿಸಾರಿ ಹೇಳು ತ್ತಿವೆ.

ಸೇವೆಗೆ ಸೂಕ್ತ ಗೌರವ: 1964 ರಿಂದ 1967 ರ ವರೆಗೆ ದುರ್ಗಾಬಾಯಿ ದೇಶಮುಖ್ ಅಂಧರ ಯೋಗಕ್ಷೇಮ ಮತ್ತು ಪುನರ್ವಸತಿ ಮಂಡಳಿಯ ಸದಸ್ಯಳಾಗಿ ಸೇವೆ ಸಲ್ಲಿಸಿದ ಫಲವಾಗಿ 'ರಸ್ಟನ್ ನೇರ್ವ್ಯಾಂಜಿ ಅಲ್ಪವಾಲಿ ಪ್ರಶಸ್ತಿ'ಯನ್ನು ನೀಡಲಾಗಿದೆ.

1963ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯವು ದುರ್ಗಾ ಬಾಯಿಯ ಪಾಂಡಿತ್ಯ ಮತ್ತು ಸೇವೆಯನ್ನರಿತು ಆಕೆಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿತು.

1971ರಲ್ಲಿ ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡ ಳಿಯು ದುರ್ಗಾಬಾಯಿ ದೇಶಮುಖ್‌ರವರಿಗೆ 'ನೆಹರು ಸಾಕ್ಷ ರತಾ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಆಕೆಯ ಬಹು

ಮುಖವಾದ ಸೇವೆಯನ್ನು ಗುರುತಿಸಿ 1975ನೆಯ ಗಣರಾಜ್ಯ ದಿನ ಡಾ॥ ದುರ್ಗಾಬಾಯಿ ದೇಶಮುಖ್‌ರವರಿಗೆ 'ಪದ್ಮ ವಿಭೂಷಣ' ಪ್ರಶಸ್ತಿಯನ್ನು ಭಾರತ ಸರಕಾರ ನೀಡಿದೆ. ಭಾರತದ ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ದಿಟ್ಟತನ ದಿಂದ ಹೋರಾಡಿದ ಮಹಿಳಾಮಣಿಗಳ ಅಗ್ರಪಂಕ್ತಿಯಲ್ಲಿ ದುರ್ಗಾಬಾಯಿ ದೇಶಮುಖ್ ಒಬ್ಬಳು. ಇತಿಹಾಸ ಆಕೆಯ ಸೇವೆ ಮತ್ತು ತ್ಯಾಗವನ್ನು ಸ್ಮರಿಸದಿರದು. ಆಕೆ ಅಷ್ಟರಲ್ಲೇ ತೃಪ್ತಳಾಗದೆ ಭಾರತದ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಾಧಿಸಲು ಅಹರ್ನಿಶಿ ದುಡಿಯುತ್ತಿರುವಳು.



ಡಾ॥ ವೆಲ್ತಿಫಿಷರ್

ಡಾ॥ ವೆಲ್ತಿ ಫಿಷರ್

ಹಿನ್ನೆಲೆ : ಲಕ್ನೋ ಉತ್ತರ ಪ್ರದೇಶದ ರಾಜಧಾನಿ. ಲಕ್ನೋ-ಕಾನ್ಪುರ ಹೆದ್ದಾರಿಯಲ್ಲಿ ಲಕ್ನೋದಿಂದ ಕೇವಲ 5 ಮೈಲಿ ದೂರದಲ್ಲಿ ರಸ್ತೆಯ ಬಲಭಾಗಕ್ಕೆ 'ಸಾಕ್ಷರತಾನಿಕೇತನ' ಎಂಬ ದೊಡ್ಡ ನಾಮಫಲಕ ಎದ್ದು ಕಾಣುತ್ತ ಎಲ್ಲರನ್ನೂ ಸ್ವಾಗತಿಸುತ್ತಲಿದೆ. ಆ ಕೇಂದ್ರ ವಯಸ್ಕರ ಶಿಕ್ಷಣವೇತ್ತರ ಯಾತ್ರಾಸ್ಥಳವೂ ಹೌದು.

ಸಾಕ್ಷರತಾನಿಕೇತನ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಹೆಸರಾಂತ ಸೇವೆ ಸಲ್ಲಿಸಿದೆ. ಅದು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತಿ ಪಡೆದಿದೆ. ಬಾಯಾರಿದವನಿಗೆ ನೀರನ್ನು ನೀಡುವುದು, ಹಸಿದವನಿಗೆ ಅನ್ನ ನೀಡುವುದು ಪುಣ್ಯ ಕೆಲಸ ತಾನೆ ? ಅಂತೆಯೇ ನಿರಕ್ಷರಕುಕ್ಷಿಯ ಜ್ಞಾನ ಚಕ್ಷುವನ್ನು ತೆರೆಯುವಂತೆ ಮಾಡುವುದು ಅಷ್ಟೇ ಪವಿತ್ರಕಾರ್ಯ. ಅಂತಹ ಕಾರ್ಯದಲ್ಲಿ ನಿರತವಾಗಿರುವ ಸಂಸ್ಥೆ 'ಸಾಕ್ಷರತಾ ನಿಕೇತನ'.

ಸಾಕ್ಷರತಾ ನಿಕೇತನವನ್ನು ಸ್ಥಾಪಿಸಿದವಳು ಒಬ್ಬ ಮಹಿಳೆ. ಆಕೆ ಅಮೆರಿಕದವಳು. ಅಲ್ಲಿಂದ ಭಾರತಕ್ಕೆ ಬಂದು ಇಲ್ಲಿ ನಿರಕ್ಷರ ಕುಕ್ಷಿಗಳ ಸೇವೆಗೆ ಕಂಕಣ ತೊಟ್ಟಿದ್ದು ಹೆಚ್ಚಿನ ಸಂಗತಿ. ಆಕೆ ಒಬ್ಬ ವ್ಯಕ್ತಿಯಲ್ಲ. ಒಂದು ಮಹಾಶಕ್ತಿ. ಸಂಸ್ಥೆಗಿಂತಲೂ ಹೆಚ್ಚು ಶ್ರಮಿಸಿ ವಿಶೇಷ ಸಾಧನೆ ಮಾಡಿದ ಕೀರ್ತಿ

ಡಾ॥ ವೆಲ್ತಿಫಿಷರ್‌ಗೆ ಸಲ್ಲಬೇಕಾದದ್ದು. ಅಂತೆಯೇ ಆಕೆಗೆ ಅಂತಹ ಗೌರವ ಸಂದಿದೆ.

ಬಾಲ್ಯ ಮತ್ತು ವಿದ್ಯಾಭ್ಯಾಸ : ಡಾ॥ ವೆಲ್ತಿಫಿಷರ್ ಹುಟ್ಟಿದ್ದು 18–9–1879 ರಲ್ಲಿ ನ್ಯೂಯಾರ್ಕಿನ ಹತ್ತಿರವಿರುವ ರೋಮ್ ನಗರದಲ್ಲಿ. ಆಕೆಯು ಆಗಿನ ಹೆಸರು ಕುಮಾರಿ ವೆಲ್ತಿ ಹಂಸಿಗರ್. ಈಗ ಆಕೆ ಡಾ॥ ವೆಲ್ತಿಫಿಷರ್ ಎಂಬುದಾಗಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಚಿರಪರಿಚಿತಳು.

ಕುಮಾರಿ ವೆಲ್ತಿ ಹಂಸಿಗರ್ ತನ್ನ ಶಾಲಾ ವಿದ್ಯಾಭ್ಯಾಸವನ್ನು ನ್ಯೂಯಾರ್ಕಿನಲ್ಲಿ ಮಾಡಿದಳು. ಸಿರಾಕ್ಯೂಸ್ ವಿಶ್ವವಿದ್ಯಾಲಯದ ಪದವೀಧರೆ ಆಕೆ. ವಿದ್ಯಾಭ್ಯಾಸ ಮುಗಿದಾಗ ಅವಳಿಗೆ 26 ವರ್ಷ. ಅವಳದು ಕೋಕಿಲ ಕಂಠ. ಸುಂದರವಾದ ಮೈಕಟ್ಟು. ಆಕೆ ತನ್ನ ಮಧುರ ಗಾಯನಕ್ಕೆ ಅನೇಕ ಬಹುಮಾನಗಳನ್ನು ಪಡೆದಿರುವಳು. ಕುಮಾರಿ ಹಂಸಿಗರ್ ಸಂಗೀತದಿಂದಲೆ ತನ್ನ ಜೀವನವನ್ನು ಜರುಗಿಸಲು ಇಷ್ಟಪಟ್ಟಳು. ಅದಕ್ಕಾಗಿ ಯುರೋಪಿಗೆ ಹೋದಳು. ಆದರೆ ಅದು ಸಾಧ್ಯವಾಗಲಿಲ್ಲ.

ಕುಮಾರಿ ಹಂಸಿಗರ್ ಚೀನಾದಲ್ಲಿ ಉಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಲು ನಿಶ್ಚಯಿಸಿದಳು. ಅಲ್ಲಿ ನಾನ್‌ಚುಂಗ್ ಎಂಬಲ್ಲಿ ಶಾಲಾ ಅಧ್ಯಾಪಕಿಯಾದಳು. ಆ ಊರು ಅಮೆರಿಕಕ್ಕೆ ಹತ್ತು ಸಾವಿರ ಮೈಲಿ. ಭಾರತೀಯರಲ್ಲಿ ಹುಟ್ಟಿದ ಊರನ್ನು ಬಿಟ್ಟು ಹೊರಗೆ ಹೋಗಿ ದುಡಿಯಲು ಹಿಂಜರಿಯುವ ಗಂಡಸರೇ ಹೆಚ್ಚು. 'ಅಪ್ಪ ಹಾಕಿದ ಆಲದ ಮರ' ಎಂಬಂತೆ ಊರಿನಲ್ಲೇ ಉದ್ಯೋಗ ದೊರೆಯಬೇಕು. ಹಾಗೂ ಅಲ್ಲೇ ಪೂರ್ಣಾವಧಿ

ಸೇವೆ ಸಲ್ಲಿಸಿ ವಿಶ್ರಾಂತಿವೇತನ ಪಡೆಯಬೇಕೆನ್ನುವ ಜನರೇ ಹೆಚ್ಚು. ಹೀಗಿರುವಲ್ಲಿ ಕುಮಾರಿ ಹಂಸಿಗರ್ ತನ್ನ ಹುಟ್ಟೂರಿನಿಂದ 10 ಸಾವಿರ ಮೈಲಿಯಾಚೆ ಪರದೇಶದಲ್ಲಿ ಕೆಲಸಮಾಡಲು ಒಪ್ಪಿದುದು ಧೈರ್ಯವೇ ಸರಿ.

ಚೀನದ ಶಾಲೆಯಲ್ಲಿ ಸೇವೆ : ಚೀನಿಯರ ಪರಿಸ್ಥಿತಿ ಅಷ್ಟೇನು ಹೇಳಿಕೊಳ್ಳುವಂತಿರಲಿಲ್ಲ. ಅಲ್ಲಿ ಒಬ್ಬ ಫ್ರೆಂಚ್ ಮಾಲೀಕನ ತೋಟದ ಹೆಬ್ಬಾಗಿಲಿನ ಮೇಲೆ 'ನಾಯಿ ಮತ್ತು ಚೀನಿಯರ ಪ್ರವೇಶ ನಿಷೇಧಿಸಲಾಗಿದೆ' ಎಂದು ಬರೆಯಲಾಗಿತ್ತು. ಅದನ್ನು ನೋಡಿ ಕುಮಾರಿ ಹಂಸಿಗರ್‌ಗೆ ಅತೀವ ವೇದನೆ ಆಯಿತು.

ಬಾಲ್ಡ್‌ವಿನ್ ಶಾಲೆ ಆಕೆಯನ್ನು ಸ್ವಾಗತಿಸಿತು. ಕುಮಾರಿ ಹಂಸಿಗರ್ ಶಾಲೆಯ ಮುಖ್ಯೋಪಾಧ್ಯಾಯನಿಯ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಂಡಳು. ಅವಳಿಗೆ ಪ್ರತ್ಯೇಕ ವಸತಿ ಗೃಹ ಮೀಸಲಾಗಿತ್ತು. ಆದರೆ ಅಲ್ಲಿ ತಾನೊಬ್ಬಳೇ ಇರಲು ಒಪ್ಪಲಿಲ್ಲ. ಶಾಲೆಯ ಆಡಳಿತ ವರ್ಗದವರ ಇಚ್ಛೆಗೆ ವಿರೋಧವಾಗಿ ಇಲಿಯನ್‌ತಾಂಗ್ ಎಂಬ ಚೀನಿ ಮಹಿಳಾ ಅಧ್ಯಾಪಕಿಯೊಡನೆ ವಾಸಿಸಲು ತೊಡಗಿದಳು. ಅಮೆರಿಕದವಳು ಚೀನಿಯರೊಡನೆ ವಾಸಮಾಡುವುದೆ ? ಹಾಗಾದರೆ ಆಕೆ ಏನು ಸ್ವರ್ಗದಿಂದ ಇಳಿದು ಬಂದವಳೆ ? ಮಾನವ ಜನಾಂಗವೆಲ್ಲವೂ ಒಂದೇ ಎಂಬ ಆಕೆಯ ಉದಾತ್ತ ಭಾವನೆ ಈ ಪ್ರಸಂಗದಿಂದ ವ್ಯಕ್ತವಾಗುವುದು.

ಇಲಿಯನ್ ತಾಂಗ್ ಚೀನಿ ಮಹಿಳೆಯ ಅಧಿಕಾರವನ್ನು ಶಾಲಾ ವಿದ್ಯಾರ್ಥಿನಿಯರು ಸಹಿಸಲಿಲ್ಲ. ಅವರು ಮುಷ್ಕರದ

ಬೆದರಿಕೆ ಹಾಕಿದರು. ಒಂದು ದಿನ ಹರತಾಳವನ್ನೂ ಸಹ ಆಚರಿಸಿದರು. ಇಬ್ಬರು ವಿದ್ಯಾರ್ಥಿನಿಯರ ತಂದೆಗಳು ಶಾಲೆಗೆ ಬಂದು 'ಒಬ್ಬ ಚೀನಿ ಹೆಂಗಸು ನಮ್ಮ ಹುಡುಗಿಯರಮೇಲೆ ಅಧಿಕಾರ ನಡೆಸಲು ನಾವು ಒಪ್ಪುವುದಿಲ್ಲ'. ಎಂಬುದಾಗಿ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರು. ಅದಕ್ಕೆ ಕುಮಾರಿ ಹಂಸಿಗರ್ ಸೊಪ್ಪು ಹಾಕಲಿಲ್ಲ. ಕ್ರಮೇಣ ಪ್ರತಿಭಟಣೆ ತಣ್ಣಗಾಯಿತು.

ಶಾಲೆಗೆ ಬರುತ್ತಿದ್ದ ಶ್ರೀಮಂತರ ಮಕ್ಕಳ ಶಾಲಾ ಶುಲ್ಕವನ್ನು ಕುಮಾರಿ ಹಂಸಿಗರ್ ಹೆಚ್ಚಿಸಿದಳು. ಬಡ ವಿದ್ಯಾರ್ಥಿನಿಯರಿಗೆ ಪರಿಹಾರವನ್ನು ದೊರಕಿಸಿದಳು. ಶಾಲೆ ದಿನದಿನಕ್ಕೆ ಅಭಿವೃದ್ಧಿಯಾಗುತ್ತ ಬಂತು. ಶಾಲೆಯ ಹೆಬ್ಬಾಗಿಲಿನಮೇಲೆ ಚೀನಿ ಭಾಷೆಯಲ್ಲಿ "ನೀನು ಸತ್ಯವನ್ನು ಅರಿ. ಅದು ನಿನ್ನನ್ನು ಮುಕ್ತನನ್ನಾಗಿ ಮಾಡುವುದು" ಎಂಬುದಾಗಿ ಬರೆಸಿದಳು. 1910 ನೆಯ ಸಾಲಿನ ಡಿಸೆಂಬರು ತಿಂಗಳ ಒಂದು ರಾತ್ರಿ. ಅಂದು ಶಾಲೆ ಆಕಸ್ಮಿಕವಾಗಿ ಅಗ್ನಿಗೆ ಆಹುತಿಯಾಯಿತು. ಅದನ್ನು ನೋಡಿ ಕುಮಾರಿ ಹಂಸಿಗರ್‌ಗೆ ತಡೆಯಲಾರದ ದುಃಖ ಉಂಟಾಯಿತು.

ಚೀನಾ ದೇಶದಲ್ಲಿದ್ದ ಮೇಲೆ ಅಲ್ಲಿಯ ನಡೆನುಡಿಯನ್ನು ಕಲಿಯಬೇಡವೆ ? ಆಕೆ ಚೀನಿ ಭಾಷೆಯನ್ನು ಕಲಿತಳು. ಅವರ ಸಂಸ್ಕೃತಿಯನ್ನು ಅಭ್ಯಾಸಕ್ಕೆ ತಂದಳು. ಚೀನಿಯರಂತೆ ತೆಳುವಾದ ಕಡ್ಡಿಗಳ ಸಹಾಯದಿಂದ ಊಟಮಾಡುವುದನ್ನು ಕಲಿತಳು. ಒಟ್ಟಿನಲ್ಲಿ ಚೀನ ದೇಶವನ್ನು ತನ್ನದನ್ನಾಗಿ ಮಾಡಿ ಕೊಂಡಳು.

ನಿರ್ಗಮನ : ಕುಮಾರಿ ಹಂಸಿಗರ್ ಅಮೆರಿಕಕ್ಕೆ ಹಿಂತಿರುಗಿದಳು. ಅಲ್ಲಿಯ ಶ್ರೀಮಂತಿಕೆ ಚೀನದ ಕಡು ಬಡತನ ವನ್ನು ಜ್ಞಾಪಕಕ್ಕೆ ತಂದಿತು. ಆದರಿಂದ ಅವಳಿಗೆ ಬಹಳ ನೋವಾಯಿತು. ಚೀನಿಯರಿಗಿಂತ ಅಮೆರಿಕದ ನಾಯಿಯ ಸ್ಥಾನ ಉತ್ತಮವಾಗಿತ್ತು. ಅಮೆರಿಕದ ಶ್ರೀಮಂತ ಮಹಿಳೆ ಯೊಬ್ಬಳು ತನ್ನ ಸಾಕು ನಾಯಿಗೆ ಕತ್ತುಪಟ್ಟಿಯೊಂದನ್ನು ಹಾಕಿದ್ದಳು. ಅದರಮೇಲೆ ಮೂವತ್ತು ಸಾವಿರ ಡಾಲರು!! ಹಾಗೆಂದು ಆ ನಾಯಿಯ ಕತ್ತುಪಟ್ಟಿಯ ಮೇಲೆ ಬರೆಯ ಲಾಗಿತ್ತು. ಈ ಪರಿಸ್ಥಿತಿಯನ್ನು ನೋಡಿ ಕುಮಾರಿ ಹಂಸಿಗರ್‌ಗೆ ಸಂಕಟವಾಯಿತು. ಅಮೆರಿಕದಲ್ಲಿರಲು ಅವಳ ಮನಸ್ಸು ಒಪ್ಪಲಿಲ್ಲ. ಚೀನಾ ದೇಶಕ್ಕೆ ವಾಪಸುಹೋಗಲು ಅವಳ ಮನಸ್ಸು ಹಾತೊರೆಯುತ್ತಿತ್ತು. ಆದರೆ ಅಲ್ಲಿಯ ಶಾಲೆಯನ್ನು ಪುನರುಜ್ಜೀವನಗೊಳಿಸಲು ಹಣ ಬೇಡವೆ ? ಅದಕ್ಕಾಗಿ ಹಣ ಸಂಗ್ರಹ ಕಾರ್ಯದಲ್ಲಿ ತೊಡಗಿದಳು. ಸುಮಾರು 600 ಸಭೆಗಳನ್ನು ಉದ್ದೇಶಿಸಿ ಮಾತನಾಡಿದಳು. ತನ್ನ ನಿರೀಕ್ಷೆ ಗಿಂತಲೂ ಹೆಚ್ಚು ಹಣ ಸಂಗ್ರಹವಾಯಿತು. ಅಮೆರಿಕಕ್ಕೆ ಬಂದದ್ದು ಸಾರ್ಥಕವಾಯಿತು ಎಂದುಕೊಂಡಳು.

ಪುನಃ ಚೀನಾಕ್ಕೆ: ಕುಮಾರಿ ಹಂಸಿಗರ್ ಅವಳ ಮುಂದಿನ ಕಾರ್ಯವಿದ್ದುದು ಚೀಣದಲ್ಲಿ. ಅಲ್ಲಿ ಹಿಂದಿದ್ದ ಶಾಲೆಯ ಹತ್ತಿರ ಹನ್ನೆರಡು ಎಕರೆ ಜಮೀನನ್ನು ಖರೀದಿಗೆ ಕೊಂಡಳು. ಆದರೆ ಅದೊಂದು ಹಳೆಯ ಸಮಾಧಿ. ಫಾಸಿ ಶಿಕ್ಷೆಗೆ ಗುರಿಯಾದವರನ್ನು ಅಂತಿಮ ಪ್ರಾರ್ಥನೆಗಾಗಿ ಕರೆದು ತರುತ್ತಿದ್ದ ಜಾಗ ಅದು. ಆದನ್ನು ಅಗೆಸಿ ಅದರಲ್ಲಿದ್ದ ಅವಶೇಷ

ಗಳನ್ನು ತೆಗೆಸಿ ಚೀನಿಯರ ಧರ್ಮಾನುಸಾರ ಹೊಸ ಸಮಾಧಿ ಯಲ್ಲಿ ಹೂಳಿಸಲಾಯಿತು. ಚೀನಿಯರ ಧರ್ಮ ಮತ್ತು ಸಂಸ್ಕೃತಿಗೆ ಅಪಚಾರವಾಗದಂತೆ ನೋಡಿಕೊಂಡು ಆ ಸ್ಥಳದಲ್ಲಿ ಹೊಸಕಟ್ಟಡವನ್ನು ಸಿದ್ಧಪಡಿಸಲಾಯಿತು.

ಚೀನಿಯರ ಕೃತಜ್ಞತೆ: ವಿಶ್ವದ ಮೊದಲನೆಯ ಯುದ್ಧ ಪ್ರಾರಂಭವಾಯಿತು. ವೆಲ್ತಿಯು ಅಮೆರಿಕಕ್ಕೆ ಹೋಗಲು ಇಚ್ಛಿಸಿದಳು. ಆದರಿಂದ ತಾನು ಕಟ್ಟಿಸಿದ್ದ ಶಾಲೆಯ ಕಟ್ಟಡ ಹಾಗೂ ಅದಕ್ಕೆ ಸೇರಿದ್ದೆಲ್ಲವನ್ನೂ ಚೀನಿಯರಿಗೆ ಕೊಡುಗೆಯ ನ್ನಾಗಿ ನೀಡಿದಳು. ತನ್ನ ನೆಚ್ಚಿನ ಸ್ನೇಹಿತೆಯಾದ ಇಲಿಯನ್ ತಾಂಗ್ ಅವಳನ್ನು ಆ ಶಾಲಾ ಸಂಸ್ಥೆಯ ಅಧ್ಯಕ್ಷಿಣಿಯನ್ನಾಗಿ ಮಾಡಿದಳು. ಶಾಲಾ ವಿದ್ಯಾರ್ಥಿನಿಯರು ಕುಮಾರಿ ಹಂಸಿಗರ್ (ಡಾ॥ ವೆಲ್ತಿ)ಗೆ ಹೃದಯ ಸ್ಪರ್ಶಿಯಾದ ಬೀಳ್ಕೊಡಿಗೆಯನ್ನು ಏರ್ಪಡಿಸಿದರು. ಆ ಸಂದರ್ಭದಲ್ಲಿ ಆಕೆಗೆ ತೋಳ್ಬಂದಿಯನ್ನು ಉಡುಗೊರೆಯನ್ನಾಗಿತ್ತರು. ಅದು ತೋಳನ್ನು ಬಂಧಿಸುವಂತೆ ಚೀಣ ದೇಶ ಅವಳ ಹೃದಯವನ್ನು ಬಂಧಿಸಲಿ ಎಂಬುದಾಗಿ ಆಶಿಸಿದರು. ಕುಮಾರಿ ಹಂಸಿಗರ್ ಅಮೆರಿಕದಲ್ಲೂ ಸಹ ಸುಮ್ಮನೆ ಕೂಡಲಿಲ್ಲ. ಫ್ರಾನ್ಸಿಗೆ ನಡೆದಳು. ಅಲ್ಲಿ ಯುದ್ಧ ದಲ್ಲಿ ನಿರತರಾಗಿದ್ದ ಸೈನಿಕರ ಸೇವೆಗೆ ನಿಂತಳು. ಅಲ್ಲಿ ಕೂಲಿ ಗಳಾಗಿ ಕೆಲಸ ಮಾಡುತ್ತಿದ್ದ ಚೀನಿಯರೊಡನೆ ಸ್ನೇಹ ಬೆಳಸಿ ದಳು.

ವೈವಾಹಿಕ ಜೀವನ: ಬ್ರಹ್ಮಚಾರಿಣಿಯಾಗಿ ಸೇವೆ ಸಲ್ಲಿ ಸುತ್ತಿದ್ದ ಕುಮಾರಿ ಹಂಸಿಗರ್ ವೈವಾಹಿಕ ಜೀವನಕ್ಕೆ ಕಾಲಿಡ ಬೇಕಾಯಿತು. ಅವಳು ತನ್ನ 44ನೆಯ ವಯಸ್ಸಿನಲ್ಲಿ ಅಂದರೆ

1924ರಲ್ಲಿ ಫ್ರೆಡರಿಕ್ ಜಾನ್ ಫಿಷರ್ ಅವರನ್ನು ಲಗ್ನವಾದಳು. ನವ ದಂಪತಿಗಳು ಚೀಣ ಮತ್ತು ಬರ್ಮದೇಶಗಳ ಪ್ರವಾಸ ಮುಗಿಸಿಕೊಂಡು ಟಿಬೆಟ್ಟಿಗೆ ತೆರಳಿದರು. ಅಲ್ಲಿ ಟಿಬೆಟ್ಟಿನ ಅಧಿಕಾರಿಯೊಬ್ಬರನ್ನು ಕಂಡು 'ನಿಮ್ಮ ದೇಶದಲ್ಲಿ ನೆಲಸಲು ನಮಗೆ ಇಚ್ಛೆಯಿದೆ' ಎಂಬುದಾಗಿ ಫಿಷರ್ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. 'ನಿಮ್ಮ ಜನ ನಮ್ಮ ದೇಶಕ್ಕೆ ಬರಲು ನಿಷೇಧವಿದೆ. ಕಾರಣ, ನೀವು ವ್ಯಾಪಾರದ ಸೋಗು ಹಾಕಿಕೊಂಡು ಬರುತ್ತೀರಿ. ನಂತರ ಅದರ ರಕ್ಷಣೆಯ ನೆಪದಲ್ಲಿ ಸೈನ್ಯ ಸ್ಥಾಪಿಸುವಿರಿ. ಕ್ರಮೇಣ ಇಡೀ ದೇಶದ ಮೇಲೆ ನಿಮ್ಮ ಪ್ರಭುತ್ವವನ್ನು ಬೆಳೆಸುವಿರಿ' ಎಂಬುದಾಗಿ ಆ ಅಧಿಕಾರಿ ಉತ್ತರಿಸಿದನು. ಭಾರತದ ಬಗ್ಗೆ ಆಂಗ್ಲೇಯರು ನಡೆದುಕೊಂಡಿದ್ದು ಹೀಗೆ ತಾನೆ ?

ವಿಧಿ ಶ್ರೀಮತಿ ವೆಲ್ತಿ ಫಿಷರ್ ಅವರ ವೈವಾಹಿಕ ಜೀವನವನ್ನು ಅಂತ್ಯಗೊಳಿಸಿತು. ಅವರ ವೈವಾಹಿಕ ಜೀವನ ಜರುಗಿದ್ದು ಕೇವಲ ಹದಿನಾಲ್ಕು ವರ್ಷಗಳು ಮಾತ್ರ. ಪತಿಯ ವಿಯೋಗವನ್ನು ಆಕೆ ಸಹಿಸಿಕೊಂಡಳು. ತನ್ನ ಮನಸ್ಸನ್ನು ಪುನಃ ಜನತಾ ಸೇವೆಗೆ ತಿರುಗಿಸಿದಳು. ಆ ಬಗ್ಗೆ 15–12–1947 ರಂದು ಮಹಾತ್ಮ ಗಾಂಧೀಜಿಯವರನ್ನು ಭೇಟಿಮಾಡಿ ಅವರ ಸಲಹೆಯನ್ನು ಕೋರಿದಳು. "ಭಾರತದಲ್ಲಿಯೇ ವಾಸಿಸಲು ಬಂದಿದ್ದಲ್ಲಿ ಗ್ರಾಮಗಳಿಗೆ ಹೋಗಿ ಸೇವೆ ಸಲ್ಲಿಸಿ. ಭಾರತದ ಹೃದಯ ಇರುವುದು ಹಳ್ಳಿಗಳಲ್ಲೇ" ಎಂಬುದಾಗಿ ಮಹಾತ್ಮ ಗಾಂಧೀಜಿ ನುಡಿದರು.

ಸಾಕ್ಷರತಾ ನಿಕೇತನ ಸ್ಥಾಪನೆ: 1952ರಲ್ಲಿ ಅಲಹಾಬಾದಿನ ನೈನಿ ಅಗ್ರಿಕಲ್ಚರಲ್ ಇನ್ಸ್ಟಿಟ್ಯೂಟಿನಿಂದ ವೆಲ್ತಿಫಿಷರ್

ಅವರಿಗೆ ಕರೆ ಬಂದಿತು. ಅವರ ಪ್ರಕಾರ ಅಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿದಳು. ಅಲಹಾಬಾದಿನಲ್ಲೇ 1953ರಲ್ಲಿ 'ಸಾಕ್ಷರತಾ ವಿದ್ಯಾಲಯ'ವೊಂದನ್ನು ಸ್ಥಾಪಿಸಿದಳು. ಪ್ರಾರಂಭದಲ್ಲಿ ತಾನು ವಾಸಿಸುತ್ತಿದ್ದ ಕಟ್ಟಡದ ಕೈಸಾಲೆಯಲ್ಲೇ ವಯಸ್ಕರ ತರಗತಿಯನ್ನು ಪ್ರಾರಂಭಿಸಿದಳು.

ಡಾ॥ ವೆಲ್ತಿಫಿಷರ್ ತನ್ನದೇ ಆದ ಸ್ವತಂತ್ರ ಸೇವಾ ಸಂಸ್ಥೆಯೊಂದನ್ನು ತೆರೆಯಲು ಇಚ್ಛಿಸಿದಳು. ಅದಕ್ಕಾಗಿ ಅಮೆರಿಕಕ್ಕೆ ಹೋದಳು. ಅಲ್ಲಿ 50 ಸಾವಿರ ಡಾಲರು ಹಣ ಸಂಗ್ರಹಿಸಿದಳು. ಕೆ. ವಿ. ಮುನ್ಷಿಯವರು ಆಗ ಉತ್ತರ ಪ್ರದೇಶದ ರಾಜ್ಯಪಾಲರಾಗಿದ್ದರು. ಅವರ ಕರೆಗೆ ಓಗೊಟ್ಟು ಲಕ್ನೊ ಹತ್ತಿರ ಒಂದು ಸಂಸ್ಥೆಯನ್ನು ಸ್ಥಾಪಿಸಿದಳು. ಅದೇ ಇಂದು ಹೆಸರಾಂತ ಸೇವೆ ಸಲ್ಲಿಸುತ್ತಿರುವ 'ಸಾಕ್ಷರತಾ ನಿಕೇತನ'. ಅದೊಂದು ಸಾಕ್ಷರತಾ ಗ್ರಾಮವಾಗಿದೆ ಎಂದು ಹೇಳಿದಲ್ಲಿ ತಪ್ಪಾಗಲಾರದು. ಇಂದು ಅದು ವ್ಯಾಪಕವಾದ ರಾಷ್ಟ್ರೀಯ ಸಂಸ್ಥೆ. ಇಂತಹ ಕೇಂದ್ರದ ಸ್ಥಾಪನೆಗೆ ಪ್ರಾರಂಭದಲ್ಲಿ ಹತ್ತು ಎಕರೆ ಜಮೀನನ್ನು ಕೊಂಡಳು. ಅಲ್ಲಿ ವಯಸ್ಕರ ಪಠ್ಯ ಪುಸ್ತಕ ರಚನೆ, ನವಸಾಕ್ಷರರ ಸಾಹಿತ್ಯ ರಚನೆ ಮತ್ತು ತರಬೇತಿ, ಸಂಚಾರಿ ಪುಸ್ತಕ ಭಂಡಾರ ಯೋಜನೆ, ಸೂತ್ರದಗೊಂಬೆ ತಯಾರಿಕೆ ಮತ್ತು ಪ್ರದರ್ಶನದಲ್ಲಿ ತರಬೇತು, ಭಿತ್ತಿಪತ್ರಗಳ ತಯಾರಿಕೆ, ವಯಸ್ಕರ ಶಿಕ್ಷಣ ಕಾರ್ಯಕರ್ತರ ತರಬೇತು, ಕುಟುಂಬ ಕಲ್ಯಾಣ ಮತ್ತು ಯೋಜನೆ ಮುಂತಾದ ಅನೇಕ ವಿಭಾಗಗಳಿವೆ. ಈ ವಿಭಾಗಗಳಲ್ಲಿ ಕೆಲಸಮಾಡುವ ಅನೇಕ ಕಾರ್ಯಕರ್ತರಿಗೆ ಅಲ್ಲೇ ವಸತಿ ಸೌಕರ್ಯವಿದೆ. ಹಿಂದೆ ತಿಳಿಸಿದಂತೆ ಅದೊಂದು ಪುಟ್ಟ 'ಸಾಕ್ಷರತಾ ಗ್ರಾಮ'.

ನವ ಸಾಕ್ಷರರ ಸಾಹಿತ್ಯ ರಚನೆ ಸುಲಭ ಸಾಧ್ಯವಲ್ಲ. ಅದಕ್ಕೆ ತರಬೇಕಾದ ಬರಹಗಾರರು ಬೇಕು. ಅಂತಹ ತರಬೇತಿ ಕೇಂದ್ರವನ್ನು ತೆರೆಯಲು ಫೋರ್ಡ್ ಫೌಂಡೇಶನ್ ಸಂಸ್ಥೆ 69 ಸಾವಿರ ಡಾಲರು ಹಣ ಸಹಾಯ ನೀಡಿತು. ಭಾರತದ ವಿವಿಧ ರಾಜ್ಯಗಳಿಂದ ಅನೇಕ ಬರಹಗಾರರು ಬಂದು ಈ ಕೇಂದ್ರದಲ್ಲಿ ತರಬೇತು ಪಡೆದಿರುವರು. ಅಷ್ಟೇ ಅಲ್ಲ. ನೇಪಾಳ, ಅಫ್ಘಾನಿಸ್ಥಾನ ಮುಂತಾದ ವಿದೇಶಗಳಿಂದಲೂ ಸಹ ಬರಹಗಾರರು ಬಂದು ಈ ಕೇಂದ್ರದಲ್ಲಿ ತರಬೇತು ಪಡೆದಿದ್ದಾರೆ. ಇದುವರೆವಿಗೆ 229 ಮಂದಿ ಬರಹಗಾರರು ತರಬೇತು ಹೊಂದಿರುವರು.

ನವಸಾಕ್ಷರರಿಗೆ ಹಿಂದಿ ಭಾಷೆಯಲ್ಲಿ ಕೆಲವು ಪುಸ್ತಕಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು ಭಾರತ ಸರಕಾರದಿಂದ ಬಹುಮಾನ ಪಡೆದಿವೆ. ಹಿಂದಿ ಭಾಷೆಯಲ್ಲಿ ಪ್ರಕಟವಾದ ಪುಸ್ತಕಗಳನ್ನು ಇತರ ಭಾರತೀಯ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವ ಯೋಜನೆಯನ್ನೂ ಈ ಸಂಸ್ಥೆ ಕೈಕೊಂಡಿದೆ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಬೊಂಬಾಯಿನಗರ ಸಮಾಜ ಶಿಕ್ಷಣ ಸಮಿತಿ ಮುಂತಾದ ಸಂಸ್ಥೆಗಳು ಈ ಯೋಜನೆಯ ರೀತ್ಯಾ ಧನ ಸಹಾಯಪಡಿದಿವೆ.

ವಯಸ್ಕರಿಗೆ ಮನರಂಜನೆಯ ಮೂಲಕ ಜ್ಞಾನ ಪ್ರಸಾರ ಮಾಡುವುದು ಒಂದು ಅತ್ಯುತ್ತಮ ಮಾಧ್ಯಮ. ಸಾಕ್ಷರತಾ ನಿಕೇತನದಲ್ಲಿ ಸೂತ್ರದ ಗೊಂಬೆ ತಯಾರಿಕೆಯಲ್ಲಿ ತರಬೇತು ನೀಡುವ ಏರ್ಪಾಡಿದೆ. ಸೂತ್ರದ ಬೊಂಬೆ ಪ್ರದರ್ಶನ ಏರ್ಪಡಿಸಲು ತರಬೇತಾದ ಒಂದು ತಂಡವಿದೆ. ಈಚಿನ ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ನಾಟಕಗಳನ್ನು ಬರೆಸ

ಲಾಗಿದೆ. ವರದಕ್ಷಿಣೆ, ಬಾಲ್ಯ ವಿವಾಹ, ಜೀವವಿಮೆ ಮುಂತಾದ ವಿಷಯಗಳ ಮೇಲೆ ತಿಳಿವಳಿಕೆ ನೀಡುವ ನಾಟಕಗಳು ರಚಿತವಾಗಿವೆ. ಈ ನಾಟಕಗಳನ್ನೊಳಗೊಂಡ ಸೂತ್ರದ ಗೊಂಬೆ ಪ್ರದರ್ಶನಗಳು ನಡೆಯುವುವು. ಜೀವವಿಮಾ ಕಂಪನಿಯವರು ಜೀವವಿಮೆ ಪ್ರಚಾರಕ್ಕೆ ಸೂತ್ರದ ಗೊಂಬೆಯ ಪ್ರದರ್ಶನಗಳನ್ನು ಬಳಸುವರು. ಗ್ರಾಮಾಂತರ ಪ್ರದೇಶಗಳಲ್ಲಿ ಈ ಪ್ರದರ್ಶನಗಳು ಆಕರ್ಷಣೀಯವಾಗಿಯೂ ಮತ್ತು ಬೋಧಪ್ರದವಾಗಿಯೂ ಇವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನಗರದ ಕೊಳಚೆ ಪ್ರದೇಶಗಳಲ್ಲಿ ಓದುಗರ ಸಂಖ್ಯೆ ಕಡಮೆ. ಗಾಯದಮೇಲೆ ಬರೆ ಎಳೆದಂತೆ ಓದು ಕಲಿತವರಿಗೆ ಸೂಕ್ತ ಪುಸ್ತಕಗಳು ದೊರೆಯುವುದಿಲ್ಲ. ಈ ಕೊರತೆಯನ್ನು ನಿವಾರಿಸಲು ಬೆಲ್‌ಬೈಸಿಕಲ್ ಪುಸ್ತಕ ಭಂಡಾರ, ಮಾರುಕಟ್ಟೆ ಪುಸ್ತಕ ಭಂಡಾರ ಯೋಜನೆ ಮತ್ತು ಕಾರ್ಮಿಕರ ಕ್ಷೇತ್ರ ಪುಸ್ತಕ ಭಂಡಾರ ಯೋಜನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ. ಇತರ ವಯಸ್ಕರ ಶಿಕ್ಷಣ ಸಂಸ್ಥೆಗಳು ಈ ಯೋಜನೆಗಳನ್ನು ಸಾಕ್ಷರತಾ ನಿಕೇತನದ ಧನಸಹಾಯದಿಂದ ಕೈಕೊಂಡಿವೆ.

ಸಾಕ್ಷರತಾ ನಿಕೇತನದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕರ್ತರ ಮತ್ತು ತಜ್ಞರ ವಿಚಾರ ಸಂಕಿರಣ ಮತ್ತು ಸಮ್ಮೇಳನಗಳನ್ನು ನಡೆಸಲಾಗುತ್ತಿದೆ. ಇದುವರೆವಿಗೆ 6,000 ಮಂದಿ ವಯಸ್ಕರ ಶಿಕ್ಷಣ ಶಾಲಾ ಉಪಾಧ್ಯಾಯರು ವಯಸ್ಕರ ವಿದ್ಯಾಭ್ಯಾಸ ಕ್ರಮದಲ್ಲಿ ತರಬೇತು ಪಡೆದಿರುವರು. ಸಾವಿರಾರು ಮಂದಿ ನಿರಕ್ಷರ ಕುಕ್ಷಿಗಳು ಓದು ಬರಹ ಕಲಿತಿದ್ದಾರೆ.

ಸೇವೆಗೆ ಸೂಕ್ತ ಪುರಸ್ಕಾರ: ಡಾ|| ವೆಲ್ತಿಫಿಷರ್ ಅವರ ಸಾಧನೆ ಅಸಾಧಾರಣವಾದದ್ದು. ಹಿಂದೆಯೇ ಹೇಳಿರುವಂತೆ ಆಕೆ ಒಬ್ಬ ವ್ಯಕ್ತಿಯಲ್ಲ. ಒಂದು ಮಹಾಶಕ್ತಿ. ಮೇಲೆ ವಿವರಿಸಿರುವಂತಹ ಬೃಹತ್ ಕಾರ್ಯಕ್ರಮಗಳನ್ನೊಳಗೊಂಡ ಸಂಸ್ಥೆಯೊಂದನ್ನು ಸ್ಥಾಪಿಸಿ ನಡೆಸಿಕೊಂಡು ಬರುವುದು ಸುಲಭದ ಕಾರ್ಯವಲ್ಲ. ಈ ಸಂಸ್ಥೆಗೆ ಹಣದ ಕೊರತೆ ಕಾಣದಿರುವಂತೆ ಆಕೆ ಅಮೆರಿಕಕ್ಕೆ ಹೋಗಿ ರೇಡಿಯೊ ಟೆಲಿವಿಷನ್ ಕಾರ್ಯಕ್ರಮಗಳ ಮೂಲಕ ಪ್ರಚಾರ ಮಾಡಿ ಸಾವಿರಾರು ಡಾಲರು ಹಣವನ್ನು ಸಂಗ್ರಹಿಸಿರುವಳು. ಆಕೆಯ ಶ್ರಮ ಮತ್ತು ಪ್ರತಿಭೆಯ ಫಲವಾಗಿ ಅಂತರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಸಾಕ್ಷರತಾ ನಿಕೇತನಕ್ಕೆ ಧನ ಸಹಾಯ ನೀಡುತ್ತಲಿವೆ. ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗೆ ಆಕೆಗೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪಾರಿತೋಷಕಗಳು ದೊರೆತಿವೆ. 1964 ರಲ್ಲಿ ರಾಮೋನ್ ಮ್ಯಾಗ್ಸೆಪಾರಿತೋಷಕ ದೊರೆಯಿತು. ಅದರ ಮೌಲ್ಯ ಹತ್ತು ಸಾವಿರ ಡಾಲರು. ಆ ಹಣದಿಂದ 1966ರಲ್ಲಿ 'ಕಿಸಾನ್ ವಿದ್ಯಾಪೀಠ'ವನ್ನು ತೆರೆಯಲಾಯಿತು. ಭಾರತದ ಮೂಲಭೂತ ಸಮಸ್ಯೆ ಆಹಾರ. ವ್ಯವಸಾಯ ಇಲಾಖೆ ಈದಿಸೆಯಲ್ಲಿ ಹೆಚ್ಚು ಶ್ರಮಿಸುತ್ತಲಿದೆ. ಅದರ ಉಪಯೋಗವನ್ನು ಸಾಮಾನ್ಯ ರೈತ ಇಂದು ಪಡೆಯಬೇಕಾಗಿದೆ. ಕಿಸಾನ್ ವಿದ್ಯಾಪೀಠದಲ್ಲಿ ರೈತ ಯುವಕರಿಗೆ ವ್ಯವಸಾಯ, ಪಶುಪಾಲನೆ ಮುಂತಾದ ವಿಷಯಗಳಲ್ಲಿ ತರಬೇತು ನೀಡಲಾಗುವುದು.

1971 ರ ಏಪ್ರಿಲ್ ತಿಂಗಳಿನಲ್ಲಿ ಅಮೆರಿಕದ ಅಂತರ ರಾಷ್ಟ್ರೀಯ ವೆರೈಟಿ ಕ್ಲಬ್ಬಿನವರು ಶ್ರೀಮತಿ ವೆಲ್ತಿಫಿಷರ್

ಅವರಿಗೆ 'ಹ್ಯುಮಾನಿಟೇರಿಯನ್ ಅವಾರ್ಡ್' ನೀಡಿರುತ್ತಾರೆ. ಅದು ಆ ಕ್ಲಬ್ಬಿನ ಮೂರನೆಯ ಪ್ರಶಸ್ತಿ. ಹಿಂದಿನ ಎರಡು ಪಾರಿತೋಷಕಗಳನ್ನು ಪಡೆದವರು ಸರ್ ವಿನ್‌ಸ್ಟನ್ ಚರ್ಚ್‌ಹಿಲ್ ಮತ್ತು ಡಾಕ್ಟರ್ ಆಲ್ಬರ್ಟ್ ಸ್ವಿಟ್ಜರ್. 1968 ನೆಯ ಸಾಲಿನ ಮಹಮದ್ ರೆಜಾ ಫಹಲ್ವಿ ಅಂತರರಾಷ್ಟ್ರೀಯ ಪಾರಿತೋಷಕ ನೀಡಿದ ಸಂದರ್ಭದಲ್ಲಿ ಡಾ॥ ವೆಲ್ತಿಯವರ ಸೇವೆಯನ್ನು ಯುನೆಸ್ಕೊ ಸ್ಮರಿಸಿದೆ. ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡಳಿಯು 1968 ನೆಯ ಸಾಲಿನ ನೆಹರು ಸಾಕ್ಷರತಾ ಪಾರಿತೋಷಕವನ್ನು ನೀಡಿ ಆಕೆಯನ್ನು ಗೌರವಿಸಿದೆ.

ಈಗ ಆಕೆಯ ವಯಸ್ಸು 96. ವೆಲ್ತಿಫಿಷರ್ ಅವರ ಕೀರ್ತಿಗೆ ನಿಷ್ಠಾವಂತ ದುಡಿಮೆಯೇ ಕಾರಣ. ಆಕೆಯ ಪ್ರತಿನಿತ್ಯದ ಕಾರ್ಯಕ್ರಮ ಬೆಳಗಿನ ಝಾವ ಪ್ರಾರಂಭವಾಗಿ ಸಂಜೆ ಆರು ಗಂಟೆಗೆ ಮುಕ್ತಾಯವಾಗುವುದು. ಏತನ್ಮಧ್ಯೆ ತನ್ನನ್ನು ನೋಡಲು ಬರುವವರನ್ನು ಸಂತೋಷದಿಂದ ಸ್ವಾಗತಿಸಿ ಅವರೊಡನೆ ವಿಚಾರವಿನಿಮಯ ಮಾಡುವಳು. ಆಕೆಯೊಡನೆ ಸಂಭಾಷಣೆ ನಡೆಸುವುದು ಸಂತೋಷದ ಸಂಗತಿ.

ಕೆಲವು ವರ್ಷಗಳ ಹಿಂದೆ ಆಕೆ ಆಕಸ್ಮಿಕ ಅಪಘಾತಕ್ಕೆ ಒಳಗಾದಳು. ಆಗ ಆಕೆಯ ಮಂಡಿಯ ಚಿಪ್ಪು ಮುರಿಯಿತು. ಯಾರೋ ಒಬ್ಬರು ಈ ಬಗ್ಗೆ ಪ್ರಶ್ನಿಸಿದಾಗ ಆಕೆ ಕೊಟ್ಟ ಉತ್ತರ 'ದೇಹದಲ್ಲಿ ಮುರಿಯಬೇಕಾದ ಮೂಳೆಗಳು ಇನ್ನೂ ಇವೆ' ಎಂಬುದಾಗಿ. ಈ ಉತ್ತರ ಯಾರಿಗಾದರೂ ಧೈರ್ಯವನ್ನು ತಾರದಿರದು.

ಡಾ॥ ವೆಲ್ತಿಫಿಷರ್ ಚಿಕ್ಕಂದಿನಿಂದಲೇ ಒಳ್ಳೆಯ ಬರಹ ಗಾರಳು. ಆಕೆಯಿಂದ ರಚಿತವಾದ 'ಹವ್ ಸರಕಾರ್ ಹೈ' ಎಂಬ ಪುಸ್ತಕದ 50 ಸಾವಿರ ಪ್ರತಿಗಳನ್ನು ಭಾರತ ಸರಕಾರ ಕೊಂಡು ಆಕೆಯನ್ನು ಪುರಸ್ಕರಿಸಿದೆ. ಶ್ರೀಮತಿಯವರು ಶಿಕ್ಷಣದ ಮೇಲೆ ಹಲವಾರು ಪ್ರಬಂಧಗಳನ್ನು ಮತ್ತು ಎಂಟು ಪುಸ್ತಕಗಳನ್ನು ಬರೆದಿದ್ದಾರೆ.

ಇತ್ತೀಚೆಗೆ ಅಂದರೆ 3–4 ವರ್ಷಗಳ ಹಿಂದೆ ಡಾ॥ ವೆಲ್ತಿ ಯವರು ವಿಶ್ರಾಂತಿ ಬಯಸಿ ಸಾಕ್ಷರತಾನಿಕೇತನದ ಕಾರ್ಯಕ್ಷೇತ್ರ ದಿಂದ ಬಿಡುಗಡೆ ಹೊಂದಿ ಅಮೆರಿಕದಲ್ಲಿ ನೆಲಸಿರುವಳು. ಆದರೆ ಸಾಕ್ಷರತಾನಿಕೇತನ ಮುಂದುವರಿಯಲು ಭದ್ರವಾದ ಅಸ್ತಿಭಾರ ಹಾಕಿರುವಳು. ಆಕೆಯ ಶರೀರ ಅಮೆರಿಕದಲ್ಲಿದೆ. ಆದರೆ ಹೃದಯ ಮಾತ್ರ ಭಾರತದ ದೀನದಲಿತರ ಸೇವೆಗಾಗಿ ಮಿಡಿಯುತ್ತಿದೆ.

ನಿರಕ್ಷರತಾ ನಿವಾರಣೆ ಕಷ್ಟಸಾಧ್ಯವಾದ ಕೆಲಸ. ಆದರೆ ಅದರಿಂದ ವಿಚಲಿತರಾಗಬಾರದು ಅಥವಾ ಆ ಸಮಸ್ಯೆಯನ್ನು ಹಿಯಾಳಿಸಲೂ ಕೂಡದು. "ಇಡೀ ಕತ್ತಲನ್ನು ತೆಗಳುವುದಕ್ಕಿಂತ ಒಂದು ಜ್ಯೋತಿಯನ್ನು ಬೆಳಗುವುದು ಮೇಲು."

ಅಮೆರಿಕದ ಮಹಿಳೆಯೊಬ್ಬಳು ಭಾರತವನ್ನು ತನ್ನ ತವುರೆಂದು ತಿಳಿದು ನಿರಕ್ಷರ ಕುಕ್ಷಿಗಳ ಸೇವೆಯಲ್ಲಿ ನಿರತವಾದದ್ದು ಅಪೂರ್ವವಾದುದೇ ಸರಿ.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
33.	ತುಳ್ಳಲ್ ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್